ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ


50 1974 2023

ಬುಧವಾರ, ಫೆಬ್ರವರಿ 14, 2024
ದಾವಣಗೆರೆ, ಪುಟ : 8 ರೂ : 5
ಸಂಪುಟ : 50 ಸಂಚಿಕೆ : 273 RNI : 27369/75

janathavani@mac.com
www.janathavani.com
08192 254736 91642 99999



# ನಗರದ ದೇವರಾಜ ಅರಸು ಬಡಾವಣೆಯ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು



ಡಿ. ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದ 26 ನೇ ವಾರ್ಷಿಕೋತ್ಸವ ಹಾಗೂ ರಥೋತ್ಸವ ಕಾರ್ಯಕ್ರಮವು ನಿನ್ನೆ ಆರಂಭಗೊಂಡಿದ್ದು, ಇದೇ ದಿನಾಂಕ 16 ರವರೆಗೆ ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 8 ಗಂಟೆಯಿಂದ ಅಭಿಷೇಕ, ಕಳಸ ಸ್ಥಾಪನೆ, ನವಗ್ರಹ ಹೋಮ, ಪೂರ್ಣಾಹುತಿ, ಮಹಾ ಮಂಗಳಾರತಿ, ಮಂತ್ರಪುಷ್ಪ, ಅಷ್ಟಾವಧಾನ ಸೇವೆ, ತೀರ್ಥಪ್ರಸಾದ ವಿನಿಯೋಗವಿದೆ. ಸಂಜೆ 7 ಗಂಟೆಗೆ 'ಶಿವ ದಾಕ್ಷಾಯಿಣಿ ನೃತ್ಯ ವೈಭವ' ರೂಪಕವನ್ನು ತಪಸ್ಯ ವಾಸವಿ ಸಂಸ್ಥೆಯ ಮಕ್ಕಳು ಪ್ರದರ್ಶಿಸಲಿದ್ದಾರೆ.

ನಾಳೆ ಗುರುವಾರ ಬೆಳಿಗ್ಗೆ 8 ಗಂಟೆಗೆ ಪಂಚಾಮೃತ ಅಭಿಷೇಕ, ಮಂಡಲ ಆರಾಧನೆ, ರುದ್ರಹೋಮ, ವಿವಿಧ ಪೂಜಾ ಕಾರ್ಯಕ್ರ ಮಗಳು ಜರುಗಲಿವೆ. ಸಂಜೆ 5 ಕ್ಕೆ ಶ್ರೀ ಗಿರಿಜಾ ಶಂಕರ ಕಲ್ಯಾಣ ಹಮ್ಮಿಕೊಳ್ಳಲಾಗಿದ್ದು, ಬೆಂಗಳೂರಿನ ಪುರೋಹಿತರಾದ ಜಿ. ಪ್ರವೀಣ್ ಅವರಿಂದ ನಡೆಯಲಿದೆ. ಇದಲ್ಲದೇ ಪ್ರತಿ ಶನಿವಾರ ಸಂಜೆ 6.30 ಕ್ಕೆ ದೇವಸ್ಥಾನದಲ್ಲಿ ಹನುಮಾನ್ ಚಾಲಿಸ್ ಪಠಣ ನಡೆಯಲಿದೆ.




ದಾವಣಗೆರೆ: ರಂಗಭೂಮಿ ಟ್ರಸ್ಟ್ ಕೊಡಗು ಹಾಗೂ ಪ್ರೇರಣಾ ಯುವ ಸಂಸ್ಥೆ ಸಹಯೋಗದಲ್ಲಿ ಶನಿವಾರ ಸಂಜೆ ಸ್ವಾತಂತ್ರ್ಯ ಹೋರಾಟಗಾರ ವೀರ ಸಾರ್ವಕರ್ ಬದುಕಿನ ಕಥಾನಕ ಕರಿನೀರ ವೀರ ನಾಟಕ ಪ್ರದರ್ಶನವನ್ನು ನಗರದ ಪದ್ಮಶ್ರೀ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿತ್ತು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಡ್ಡಂಡ ಕಾರ್ಯಪ್ಪ ರಚನೆ, ಪರಿಕಲ್ಪನೆ, ವಿನ್ಯಾಸ ಹಾಗೂ ನಿರ್ದೇಶನದಲ್ಲಿ ನಡೆದ ಈ ನಾಟಕ ಪ್ರದರ್ಶನವನ್ನು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ್ದ ವೀರ ಸಾರ್ವಕರ್ ಅವರ ಸಾಹಸಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿತ್ತು.

## ಪ್ರೇಮಿಗಳ ದಿನಾಚರಣೆ

ಎರಡು ಹೃದಯಗಳ ಪ್ರೀತಿ
ಪ್ರೀತಿ ಮಧುರತೆಗಳ ಸಾಟಿ
ಸಾಟಿ ಸಮರತೆಗಳ ಗಾಢ ಬೆಸುಗೆಯ
ಬಂಧನದ ಭಾವನೆಗಳ ಪ್ರೀತಿಯ ಪ್ರೇಮ !!

ಪ್ರಕೃತಿ ಪರಿಸರ ಮನದ ಪ್ರೀತಿಯ
ಹೃದಯ ಹೂವುಗಳ ಅರಳಿದ
ಮನಗಳ ಅಯಸ್ಕಾಂತವು ಸಳೆದ
ಸೆಳೆತವು ಎರಡು ಹೃದಯಗಳ ಬಂಧನ !!

ಪ್ರೀತಿ ಪ್ರೇಮದ ಸಿಹಿಕನಸಿನ
ನನಸು ಕಾಲದ ಕಾಲ ಚಕ್ರದ
ಪ್ರೇಮಿಗಳ ಪ್ರೇಮಲೋಕದ ಸ್ವರ್ಗವೇ
ಪ್ರೇಮಿಗಳ ಕಲ್ಯಾಣದ ಪುಷ್ಕರಣಿ !!

ವಿಶ್ವ ರಾಷ್ಟ್ರಗಳ ಪ್ರತಿ ಪ್ರೇಮಿಗಳ
ದುಂಬಿಗಳ ಹಾಗೆ ಸಿಹಿಜೇನಿನ
ಮಧುರ ಮಂಧಾರ ಮಾವಿನ
ಮಾಮರದ ಕೋಗಿಲೆಗಳ ಗಾನ ಸಂಗೀತ !!

ಕವಿಯ ಕಾವ್ಯತೆಯ ಸಾಹಿತ್ಯ
ಸ್ವರ ಕೋಗಿಲೆಗಳ ಕೂಹು ಕೂಹು
ಇಂಪಾದ ತಂಪಾದ ಸ್ವರ ಸ್ನೇಹ
ಹೃದಯ ಪ್ರೇಮಿಗಳ ಮಿಲನದ ಬಯಕೆಗಳು !!

ಪ್ರಕೃತಿ ಪರಿಸರ ಪ್ರೀತಿ ಪರಿಸರ
ಹೃದಯಗಳ ಪರಿಸರ ಹಸಿರ ಪರಿಸರ
ಪಕ್ಷಿಗಳ ಪರಿಸರ ಪ್ರಾಣಿಗಳ ಪರಿಸರ
ಪ್ರೀತಿ ಪ್ರೇಮಿಗಳ ಪ್ರೇಮಾಂಕುರ ಪರಿಸರದ
ಸರಸರ ಸಲ್ಲಾಪದ ಸಂಗಮವು !!

**- ಟಿ ಜಿ ಸಂಗಮ್**, ಗಣಿತ ಶಿಕ್ಷಕರು,
ಕೊಟ್ಟೂರು ತಾ॥ ವಿಜಯ ನಗರ ಜಿಲ್ಲೆ
ಮೊಬೈಲ್ : 73492 18657

# ರಂಗಭೂಮಿಯ ಹಿರಿಯ ಕಲಾವಿದ ಹೆಚ್. ಮೆಹಬೂಬ್ ಅಲಿ ಇನ್ನಿಲ್ಲ



ದಾವಣಗೆರೆ,ಫೆ.13- ವೃತ್ತಿ ರಂಗಭೂಮಿಯ ಹಿರಿಯ ಕಲಾವಿದ ಹೆಚ್. ಮೆಹಬೂಬ್ ಅಲಿ ಅವರು ಇಂದು ಬೆಳಗಿನಜಾವ ನಿಧನರಾದರು.

ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರಿಗೆ ಸುಮಾರು 84 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಇಂದು ಸಂಜೆ ನೆರವೇರಿತು. ನಗರದ ಎಸ್‌ಓಜಿ ಕಾಲೋನಿ ಸಿ ವಿಭಾಗದಲ್ಲಿ ವಾಸವಾಗಿದ್ದ ಮೆಹಬೂಬ್ ಅಲಿ, ಕಳೆದ 6 ದಶಕಗಳಿಂದ ವೃತ್ತಿ ರಂಗಭೂಮಿಯಲ್ಲಿ ಶ್ರದ್ಧೆಯಿಂದ ವಿಭಿನ್ನ ಪಾತ್ರಗಳನ್ನು ನಿರ್ವಹಿಸಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು.

ವೃತ್ತಿ ರಂಗಭೂಮಿಯಲ್ಲಿನ ಅವರ ಸೇವೆಯನ್ನು ಪರಿಗಣಿಸಿ ನಾಟಕ ಅಕಾಡೆಮಿಯು ಪ್ರಶಸ್ತಿ ನೀಡಿ ಗೌರವಿಸಿತ್ತು. ಹಲವಾರು ಸಾಮಾಜಿಕ ಸಂಘ-ಸಂಸ್ಥೆಗಳೂ ಸಹ ಅವರನ್ನು ಗೌರವಿಸಿದ್ದವು.

**ಸಂತಾಪ** : ಮೆಹಬೂಬ್ ಅಲಿ ಅವರ ನಿಧನಕ್ಕೆ ಕರ್ನಾಟಕ ರಾಜ್ಯ ರಂಗಭೂಮಿ ಕಲಾವಿದರ ಒಕ್ಕೂಟದ ಅಧ್ಯಕ್ಷ ಕೆ. ವೀರಯ್ಯ ಸ್ವಾಮಿ, ಹಿರಿಯ ಕಲಾವಿದ - ಪತ್ರಕರ್ತ ಬಸವರಾಜ ಐರಣಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಕಲಾವಿದರಾದ ಸಾವಿತ್ರಮ್ಮ, ಶಶಿಕಲಾ, ಬಸವನಗೌಡ, ಶಂಭುಲಿಂಗಪ್ಪ, ಷರೀಫ್, ಜ್ಯೋತಿಕಲಾ ಮತ್ತು ಇತರರು ಶೋಕ ವ್ಯಕ್ತಪಡಿಸಿದ್ದಾರೆ.

**ಶ್ರದ್ಧಾಂಜಲಿ ಸಭೆ** : ರಂಗಭೂಮಿಯ ಧೀಮಂತ ಕಲಾವಿದರಾಗಿದ್ದ ಹೆಚ್. ಮೆಹಬೂಬ್ ಅಲಿ ಅವರನ್ನು ಕಳೆದುಕೊಂಡು ರಂಗಭೂಮಿ ಕ್ಷೇತ್ರ ನಿಜಕ್ಕೂ ಒಂದು ರಂಗ ನಕ್ಷತ್ರ ನನ್ನು ಕಳೆದುಕೊಂಡಂತಾಗಿದೆ ಎಂದು ರಂಗ ಸಂಘಟಕರು, ಬಯಲಾಟ ಅಕಾಡೆಮಿ ಮಾಜಿ ಸದಸ್ಯರು ಹಾಗೂ ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ಅಧ್ಯಕ್ಷರಾದ ಎನ್.ಎಸ್. ರಾಜು ವಿಷಾದ ವ್ಯಕ್ತಪಡಿಸಿದರು.

ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ಕಚೇರಿಯಲ್ಲಿ ಏರ್ಪಡಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮೆಹಬೂಬ್ ಅಲಿ ಅವರು ಸುಮಾರು ವರ್ಷಗಳ ಕಾಲ ಹಲವಾರು ನಾಟಕಗಳ ಮೂಲಕ ನಮ್ಮನ್ನು ರಂಜಿಸಿದ್ದರು ಎಂದು ಕಂಬನಿ ಮಿಡಿದರು.

ಕಲಾವಿದ ಖಾದರ್ ಪಿ. ಮಾತನಾಡಿ, ಮೆಹಬೂಬ್ ಅಲಿ ಅವರು ಹಲವಾರು ನಾಟಕ ಕಂಪನಿಗಳಲ್ಲಿ ಭಿನ್ನ ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿದ್ದರು ಎಂದು ಹೇಳಿದರು.

ಪಿ.ಜಿ. ಪರಮೇಶ್ವರಪ್ಪ, ಮಾರ್ತಾಂಡಪ್ಪ, ಪಿ ತಿಪ್ಪೇಸ್ವಾಮಿ, ವಿಠೋಬರಾವ್ ನಲ್ವಡೆ, ಎ. ಸೂರೆಗೌಡ್ರು ಬಿ. ಕೊಟ್ರೇಶ್, ನೀರ್ಥಡಿ ಬಸವರಾಜ್, ಎಂ ಎಸ್ ಶಿವಕುಮಾರಸ್ವಾಮಿ, ಪಿ. ಹನುಮಂತಾಚಾರಿ, ಮೂಗಬಸಪ್ಪ ಮಡ್ರಳ್ಳಿ, ಮತ್ತಿತರರು ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿದ್ದರು.

## ಚನ್ನಗಿರಿ : ಸಂವಿಧಾನ ಜಾಗೃತಿ ಜಾಥಾ ಇಂದು

ಸಂವಿಧಾನದ ಆಶಯವನ್ನು ಜನಸಾಮಾನ್ಯರಿಗೆ ತಿಳಿಸಿಕೊಡಲು ಸಂವಿಧಾನ ಜಾಗೃತಿ ಜಾಥಾ ಜಿಲ್ಲೆ ಯಾದ್ಯಂತ ನಡೆಯುತ್ತಿದ್ದು, ಇಂದಿನಿಂದ ಇದೇ ದಿನಾಂಕ 17 ರವರೆಗೆ ಚನ್ನಗಿರಿ ಮತ್ತು ದಾವಣಗೆರೆ ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಳಗಳಲ್ಲಿ ಸಂಚರಿಸಲಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ನಾಗರಾಜ ತಿಳಿಸಿದ್ದಾರೆ. ಜಾಥಾವು ಇಂದು ಚನ್ನಗಿರಿ ತಾಲ್ಲೂಕಿನ ದುರ್ವಿಗೆರೆ, ಮಲ ಹಾಳು, ಗೋಪನಾಳು, ಕಂಚಿಗನಾಳ್, ವಡ್ನಾಳ್, ಹೊದಿಗೆರೆ, ಹೆಬ್ಬಳ ಗೆರೆ, ಕೊರಟಗೆರೆ, ಗ್ರಾಮಗಳಲ್ಲಿ ಸಂಚರಿಸಲಿದೆ. ನಾಳೆ ಗುರುವಾರ ಚನ್ನಗಿರಿ ತಾಲ್ಲೂಕಿನ ಕೊರಟಗೆರೆ, ಚಿಕ್ಕಗಂಗೂರು, ನುಗ್ಗೇಹಳ್ಳಿ, ದೇವರ ಹಳ್ಳಿ, ಕಾಕನೂರು, ಕೊಂಡದ ಹಳ್ಳಿ, ಮಲ್ಲಾಪುರ, ಸೋಮ್ಲಾಪುರ ಗ್ರಾಮಗಳಲ್ಲಿ ಸಂಚರಿಸಲಿದೆ. ದಿನಾಂಕ 16 ರಂದು ಮಲ್ಲಾಪುರ, ಕೋಗಲೂರು, ಬೆಳ್ಳಿಗನೂಡು, ಸಂತೇಬೆನ್ನೂರು, ದೊಡ್ಡಬ್ಬಿಗೆರೆ, ಸಿದ್ದನಮಠ, ಮದಿಕೆರೆ, ತಣಿಗೆರೆ, ಗ್ರಾಮಗಳಲ್ಲಿ ಸಂಚರಿಸಲಿದೆ.

ದಿನಾಂಕ 17 ರಂದು ತಣಿಗೆರೆ, ಕಂದಗಲ್ಲು, ಮಳಲಕೆರೆ, ಬಾಡಾ, ಅಣಬೇರು, ಹುಚ್ಚವ್ವನಹಳ್ಳಿ, ಮಾಯಕೊಂಡ ಗ್ರಾಮದಿಂದ ಮುಂದಿನ ಗ್ರಾಮಗಳಿಗೆ ಸಂಚರಿಸಲಿದೆ.

# ಸಂವಿಧಾನ ಜಾಗೃತಿ ಜಾಥಾ ಹಿನ್ನೆಲೆ ಮೆರವಣಿಗೆ, ಸಂವಿಧಾನ ಪ್ರಸ್ತಾವನೆ ಪಠಣ




**ಜಗಳೂರು**

ಜಗಳೂರು, ಫೆ. 13 - ತಾಲ್ಲೂಕು ಆಡಳಿತ, ವಿವಿಧ ಇಲಾಖೆಗಳ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ಅಧಿಕಾರಿಗಳು, ವಿದ್ಯಾರ್ಥಿಗಳು, ಸಂಘಟನೆ ಮುಖಂಡರುಗಳು, ಇದೇ ದಿನಾಂಕ 20 ರಂದು 'ಸಂವಿಧಾನ ಜಾಗೃತಿ ಜಾಥಾದ ರಥೋತ್ಸವ' ಆಗಮಿಸುವ ಹಿನ್ನೆಲೆಯಲ್ಲಿ ಇಂದು ಪೂರ್ವಭಾವಿಯಾಗಿ ಅರಿವು ಮೂಡಿಸಲಾಯಿತು.

ಅಂಬೇಡ್ಕರ್ ವೃತ್ತದ ಬಳಿ ಜಮಾಯಿಸಿ ಪ್ರತಿಯೊಬ್ಬರೂ ಕೈಯಲ್ಲಿ ನೂರಾರು ಮೇಣದ ಬತ್ತಿ ಬೆಳಗಿಸುವ ಮೂಲಕ ಭಾರತ ಸಂವಿಧಾನದ ಪೀಠಿಕೆಯನ್ನು ಸಾಮೂಹಿಕವಾಗಿ ಪಠಣ ಮಾಡಲಾಯಿತು.

ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಚಂದ್ರಶೇಖರ್ ಮಾತನಾಡಿ, ಸಂವಿಧಾನ ಜಾರಿಗೊಂಡು 75 ವರ್ಷಗಳ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸಂವಿಧಾನದ ಆಶಯ ಮತ್ತು ಮೌಲ್ಯಗಳನ್ನು ಸಾರಲು ರಾಜ್ಯ ಸರ್ಕಾರ ರಾಜ್ಯವ್ಯಾಪಿ ಜಾಗೃತಿ ಜಾಥಾ ರಥೋತ್ಸವ ನಡೆಸಲಾಗುತ್ತಿದ್ದು. ತಾಲ್ಲೂಕಿನಲ್ಲಿ ಇದೇ ದಿನಾಂಕ 20 ರಿಂದ 23 ರವರೆಗೆ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಂಚರಿಸಿ ಜಾಗೃತಿ ಮೂಡಿಸಲಾಗುವುದು ಎಂದು ಮಾಹಿತಿ ನೀಡಿದರು.

ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಮಹೇಶ್ವರಪ್ಪ ಮಾತನಾಡಿ, ದೇಶದಲ್ಲಿ ಮೇಲು–ಕೀಳು, ಜಾತಿ, ಪದ್ಧತಿ ಹೋಗಲಾಡಿಸಲು ಅಂಬೇಡ್ಕರ್ ರಚಿಸಿದ ಸಂವಿಧಾನವನ್ನು ದೇಶದ ಪ್ರತಿಯೊಬ್ಬರಿಗೂ ಪರಿಚಯಿಸುವ ಕೆಲಸ ಆಗಬೇಕಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆ ಪ್ರಭಾರಿ ಸಹಾಯಕ ನಿರ್ದೇಶಕ ಬೀರೇಂದ್ರಕುಮಾರ್ , ಗ್ರೇಡ್ - 2 ತಹಶೀಲ್ದಾರ್ ಮಂಜ್ಯಾನಾಯ್ಕ, ಪ.ಪಂ ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ದೈಹಿಕ ಶಿಕ್ಷಣ ಅಧಿಕಾರಿ ಸುರೇಶ್ ರೆಡ್ಡಿ, ವಸತಿನಿಲಯ ಮೇಲ್ವಿಚಾರಕರಾದ ಮಹಾಬಲೇಶ್, ಸೋಮಣ್ಣ, ದೇವೇಂದ್ರಪ್ಪ, ಮಂಗಳಾ, ಮುಖಂಡರಾದ ಪಲ್ಲಾಗಟ್ಟೆ ಶೇಖರಪ್ಪ, ಶಂಭುಲಿಂಗಪ್ಪ, ಎ.ಡಿ. ನಾಗಲಿಂಗಪ್ಪ, ಆರ್.ಓಬಳೇಶ್, ಪೂಜಾರ್ ಸಿದ್ದಪ್ಪ, ವಕೀಲ ಹನುಮಂತಪ್ಪ, ಕುಬೇಂದ್ರಪ್ಪ, ಎಂ. ರಾಜಪ್ಪ, ಬಸವರಾಜ್, ಮಾದಿಹಳ್ಳಿ ಮಂಜುನಾಥ್, ಸತೀಶ್, ಸೇರಿದಂತೆ ನೂರಾರು ಜನ ಭಾಗವಹಿಸಿದ್ದರು.

## ಪ್ರೀತಿ ಎಂಬ ವಿಸ್ಮಯ

ಪ್ರೀತಿಯ ದಿನ ಇಂದು ಪ್ರೀತಿಯ ದಿನ
ಪ್ರೀತಿಸುವ ಎಲ್ಲರನ್ನೂ ನೆನೆಯುವ ದಿನ
ಪ್ರೀತಿಯಲ್ಲವೇ ಜೀವ ಸಂಕುಲಕ್ಕೆ ಕಾರಣ
ಪ್ರೀತಿಯಲ್ಲವೇ ಎಲ್ಲರನ್ನು ಬೆಸೆಯೊ ಬಂಧನ


ಭಗವಂತನ ಪ್ರೀತಿಸಿದರೆ ಭಕ್ತಿ ಎನ್ನುವರು
ಮಗುವನ್ನು ಪ್ರೀತಿಸಿದರೆ ಮಮತೆ ಎನ್ನುವರು
ಜಗದಿ ಗೆಳೆಯರ ಪ್ರೀತಿಗೆ ಸ್ನೇಹ ಎನ್ನುವರು
ಬಗೆಬಗೆಯ ಪ್ರೀತಿಯಲಿ ಎಲ್ಲರು ಇಹರು

ಪ್ರೀತಿಸುವರಿಗಾಗಿ ಬಾಳುವರು ಎಲ್ಲರು
ಪ್ರೀತಿಸುವರಿದ್ದವರೆ ಪುಣ್ಯವಂತರು
ಪ್ರೀತಿ ಧಾರೆ ಎರೆದಾಗ ಎಂಥಾ ಆನಂದವು
ಪ್ರೀತಿಗಾಗಿ ತ್ಯಾಗ ತನ್ನಷ್ಟಕ್ಕೆ ಆಗುವುದು

ಪ್ರೀತಿಸಿದನು ಕೃಷ್ಣ ಗೋಕುಲದೆಲ್ಲಲರನು
ಪ್ರೀತಿಸಿದನು ಹಸು ಕರು ಬೆಕ್ಕು ನವಿಲುಗಳನು
ಪ್ರೀತಿ ಕೊಟ್ಟು ಪ್ರೀತಿ ತೆಗೆದು ಬಾಳಿರೆಂದು
ಪ್ರೀತಿಯಿಂದ್ಹೇಳಿದ ಬಾಲಗೋಪಾಲವಿಠಲನು

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

# ದಿ ಟೀಮ್ ಅಕಾಡೆಮಿಗೆ ಜೆಇಇ ಮೇನ್ಸ್‌ನಲ್ಲಿ ಫಕ್ಕಿರೇಶ್‌ಗೆ 99.16%



ದಾವಣಗೆರೆ, ಫೆ. 13- 2023-24ನೇ ಶೈಕ್ಷಣಿಕ ಸಾಲಿನ ಜೆಇಇ ಮೇನ್ಸ್ ಪರೀಕ್ಷೆಯಲ್ಲಿ ನಗರದ ದಿ ಟೀಮ್ ಅಕಾಡೆಮಿಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆಗೈದಿದ್ದಾರೆ. ಕುಮಾರ ಫಕಿರೇಶ್ ಟಿ.99.16 ಗಳಿಸಿ ಅತ್ಯುತ್ತಮ ಸಾಧನೆ ಗಳಿಸಿರುತ್ತಾರೆ. ಉಳಿದಂತೆ ಲಿಂಗರಾಜು 98.90, ರಜತ್ ಟಿ.ಬಿ 97.94. ವೀರೇಶ್ ಪಾಟೀಲ್ 97.83. ತೇಜಸ್ ಟಿ 97.52. ಚರಣ್ ದೇವ್ 97.16, ಋತು ಡಿ.ರಾವ್ 97.11 ಸಂದೇಶ್ ಎಂ ಎಚ್ 97.07 ಗಳಿಸಿ ಸಾಧನೆಗೈದಿದ್ದಾರೆ. ಸಾಧಕ ವಿದ್ಯಾರ್ಥಿಗಳನ್ನು ದಿ ಟೀಮ್ ಅಕಾಡೆಮಿಯ ಅಧ್ಯಕ್ಷ ಮಂಜಪ್ಪ ಕೆ.ಎಂ., ಕಾರ್ಯದರ್ಶಿ ನಾಗಭೂಷಣಮ್ ಅಭಿನಂದಿಸಿದ್ದಾರೆ.

## ನಗರದಲ್ಲಿ ಇಂದು ಶ್ರೀ ಗುರು ಬಾಲ ಶನೇಶ್ವರಸ್ವಾಮಿ ದೇಗುಲದ ವಾರ್ಷಿಕೋತ್ಸವ

ಎತ್ತಿನ ಸಂತೆ ಹಿಂಭಾಗದ ಮಹಾಲಕ್ಷ್ಮೀ ಬಡಾವಣೆ ತಲ್ಲಿನ ಶ್ರೀ ಗುರು ಬಾಲ ಶನೇಶ್ವರಸ್ವಾಮಿ ಮಹಾಕ್ಷೇತ್ರದ ಎರಡನೇ ವಾರ್ಷಿಕೋತ್ಸವದ ಅಂಗವಾಗಿ ಇಂದು ವಿವಿಧ ಧಾರ್ಮಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 5 ಗಂಟೆಗೆ ಅಭಿಷೇಕ, ಮಧ್ಯಾಹ್ನ 12.30 ಕ್ಕೆ ಧಾರ್ಮಿಕ ಸಮಾರಂಭ ಏರ್ಪಡಿಸಲಾಗಿದೆ. ಸಂಜೆ 5.30 ಕ್ಕೆ ಶ್ರೀ ಗುರು ಬಾಲ ಶನೇಶ್ವರ ಸ್ವಾಮಿಯ ಉತ್ಸವವು ಜರುಗಲಿದೆ. ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದೆ.

## ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



**ಶ್ರೀ ಎನ್.ಜಿ.ಶಿವರಾಮಪ್ಪ ನೀಲಗುಂದ**
ನಿಧನ : 06.02.2024
*ದಾವಣಗೆರೆ ಸಿಟಿ, ನಿಟುವಳ್ಳಿ ರಸ್ತೆ, 9ನೇ ಕ್ರಾಸ್, ಕೆಟಿಜೆ ನಗರ ವಾಸಿ*

**ಶ್ರೀಮತಿ ಗದಿಗೆಮ್ಮ ಶಿವರಾಮಪ್ಪ ನೀಲಗುಂದ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 6.2.2024ನೇ ಮಂಗಳವಾರ ಬೆಳಿಗ್ಗೆ 9.32ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಎನ್.ಜಿ. ಶಿವರಾಮಪ್ಪ ನೀಲಗುಂದ**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**"ವೈಕುಂಠ ಸಮಾರಾಧನೆ"ಯನ್ನು**
ದಿನಾಂಕ : 14.02.2024ನೇ ಬುಧವಾರ ಮಧ್ಯಾಹ್ನ 12.00ಕ್ಕೆ ಮೃತರ ಸ್ವಗೃಹ, # 853/1, ನಿಟುವಳ್ಳಿ ಮುಖ್ಯರಸ್ತೆ, 9ನೇ ಕ್ರಾಸ್, ಕೆಟಿಜೆ ನಗರ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ನೀಲಗುಂದ ವಂಶಸ್ಥರು ಹಾಗೂ ಬಂಧು-ಮಿತ್ರರು
ಮೊ. : 9880335888, 9900756111
ವಿ.ಸೂ. : ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

## ಭಾವಪೂರ್ಣ ಶ್ರದ್ಧಾಂಜಲಿ



ನಮ್ಮ ಸೊಸೈಟಿಯ ಉಪಾಧ್ಯಕ್ಷರಾದ ಶ್ರೀ ಎನ್.ಜಿ. ಮೋಹನ್
ಅವರ ಸಹೋದರರಾದ

**ಶ್ರೀ ಎನ್.ಜಿ.ಶಿವರಾಮಪ್ಪ ನೀಲಗುಂದ**
ಇವರು ದಿನಾಂಕ : 6.2.2024ರ ಮಂಗಳವಾರ ನಿಧನರಾಗಿದ್ದು,
ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ...

*ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.*

ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಸಿಬ್ಬಂದಿ ವರ್ಗ
ಹಾಗೂ ಸರ್ವ ಸದಸ್ಯರು
**ವಿಜಯನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ದಾವಣಗೆರೆ.**

## ದಿ. ಶಾಮನೂರು ಸಂಗಪ್ಪ ಮೇಷ್ಟ್ರು ಅಳಿಯ ಕೆ.ತಿಪ್ಪಣ್ಣ ನಿಧನ



ದಾವಣಗೆರೆ ಸಿಟಿ ಎಸ್.ಎಸ್. ಲೇ ಔಟ್ 'ಬಿ' ಬ್ಲಾಕ್ ನೇತಾಜಿ ಇಂಡೋರ್ ಸ್ಟೇಡಿಯಂ ಹಿಂಭಾಗ, ಪದ್ಮ ಅಪಾರ್ಟ್‌ಮೆಂಟ್ ನಿವಾಸಿ

**ಶ್ರೀ ಕೆ. ತಿಪ್ಪಣ್ಣ**
(ನಿವೃತ್ತ ಗ್ರಂಥಪಾಲಕರು, MSB ಕಾಲೇಜು)
ಇವರು ದಿನಾಂಕ 12.02.2024ರ ಸೋಮವಾರ ಮಧ್ಯಾಹ್ನ 3.30ಕ್ಕೆ ನಿಧನರಾದರು. ಮೃತರಿಗೆ 76 ವರ್ಷ ವಯಸ್ಸಾಗಿತ್ತು.

ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ, ಸೊಸೆ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ

**ದಿನಾಂಕ 14.02.2024ರ ಬೆಳಿಗ್ಗೆ 7 ಗಂಟೆಯಿಂದ 10.30ರವರೆಗೆ ಮೃತರ ಸ್ವಗೃಹದಲ್ಲಿ ಇರಿಸಲಾಗಿದ್ದು, ನಂತರ ಬೆಳಿಗ್ಗೆ 10.30ಕ್ಕೆ ನಗರದ ಗ್ಲಾಸ್ ಹೌಸ್ ಹಿಂಭಾಗದ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.**

ದುಃಖತಪ್ತರು : ಪತ್ನಿ ಶ್ರೀಮತಿ ನಿರ್ಮಲ, ಮಕ್ಕಳಾದ ರವೀಂದ್ರನಾಥ .ಕೆ, ಡಾ. ರೂಪ ಕೆ.ಟಿ. ಶ್ರೀಮತಿ ರೇಖಾ ಕೆ. ಮತ್ತು ರಶ್ಮಿ ಕೆ.ಟಿ., ಸೊಸೆ ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು ಮಿತ್ರರು.
**ಮೊ : 94495 12232, 98455 68791**


ಶ್ರೀ ಕುರುವತ್ತಿ ಬಸವೇಶ್ವರ ಪ್ರಸನ್ನ

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ನಗರ ವಾಸಿ
**ಶ್ರೀ ದಿ. ಬೇಲೂರು ಚಿಗಟೇರಿ ವೀರಣ್ಣನವರ ಮಗ ಶ್ರೀ ಕುರುವತ್ತಿ ಮತ್ತು ಸಹೋದರಿಯರು**
ಮಾಡುವ ವಿಜ್ಞಾಪನೆಗಳು.
ದಿನಾಂಕ 06.02.2024ನೇ ಮಂಗಳವಾರ ಬೆಳಿಗ್ಗೆ 6.13ಕ್ಕೆ ನಮ್ಮ ಪೂಜ್ಯ ತಾಯಿಯವರಾದ
**ಶ್ರೀಮತಿ ಕೆ.ಎಂ. ಮಹದೇವಮ್ಮನವರು**
ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು** ದಿನಾಂಕ 14.02.2024ನೇ ಬುಧವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ ಚಂದ್ರೋದಯ ಮಿಲ್ ಎದುರು, ಪಿ.ಬಿ. ರಸ್ತೆ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು: **ಮೃತರ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು. ಮೊ: 96639 99329**
ವಿ.ಸೂ. : ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas


THE TEAM ACADEMY
THE TEAM ACADEMY
THE TEAM PU COLLEGE
DAVANGERE : Vidyanagara BIET Road, Anjaneya Badavane | SHIVAMOGGA : 2nd Stage, Ravindra Nagar, Savalanga Road.
Outstanding Results in JEE Mains - 2024 Session - 1
TOPPER IN JEE (Main) 2024 SESSION -1
Subject wise highest Percentile
Physics 99.31
Chemistry 99.84
Maths 99.19
99.16 Percentile
PAKKIRESH .T
98.90 Percentile
LINGARAJ R M
Rajath T B 97.94 Percentile
Veeresh Patil 97.83 Percentile
Tejas T 97.52 Percentile
Charandev M R 97.16 Percentile
Ruthu D Rao 97.11 Percentile
Sandesh M H 97.07 Percentile
Outstanding Results in JEE Mains - 2024 Session - Qualified Students
Pakkiresh T 99.16 Percential
Lingaraj R M 98.90Percential
Rajath T B 97.94 Percential
Veeresh Patil 97.83 Percential
Tejas T 97.52 Percential
Charandev M R 97.16 Percential
Ruthu D Rao 97.11 Percential
Sandesh M H 97.07 Percential
Kushal A 96.33 Percential
Atheeth 96.09 Percential
Akash B B 95.89 Percential
Kavana P 95.78 Percential
Rajendra B S 95.12 Percential
Sri Balaji 94.70 Percential
Deeksha H 94.52 Percential
Ananya S 94.48 Percential
Harshavardhan 93.98 Percential
Supritha D K 93.77 Percential
Bharamanagowda 93.57 Percential
Shivakumar 92.73 Percential
Manoj T L 92.73 Percential
Vinay H 92.40 Percential
Vishnu S 92.21 Percential
Neveditha B K 92.15 Percential
Nanditha N 91.46 Percential
Manoj Gowda 91.15 Percential
Varshan Kumar 91.15 Percential
Rahul K 90.54 Percential
Tippesh C 90.00 Percential
Mahesh N P 89.48 Percential
Nithya G Y 89.24 Percential
Harshini H S 89.08 Percential
Tanuja D 89.07Percential
Amith Katari
Anushree
Ashwani
Basavana Gowda
Basavaraj
Bhavana B V
Chaitra N
Dayana Rani
Halashree M S
Harsha K
Harshitha
Jeevan N S
Jeevitha G B
Sushmitha I M
Keerthana R
Keerthi C
Nimith S
Nireksha
Pavithra B M
Pooja C K
Pooja M N
Sparsha R C
Rabiya
Rohini H
Roopa M K
Sampreeth T
Shalini C
Shamana Patil
Shantala T L
Shivani B
Sinchana D
Sonia U M
Sourabh S
Spoorthi S
Spoorthi T
Srujan P Naik
Supriya S
Suraksha
Sushmitha D
Syed Yasmin
Tanuja D
Thilak S B
Varsha B
Narmada
Hasan Raiz
David
Asha U S
Rachana
Kavyashree
Kuldeep
Rohan M S
Ayush
Chandana
And Many More
For Davangere : 9035006723, 9035006724, 9035109411, 9900565795, 9538546758
For Shivamogga : 9035006726, 9035006727, 9902303441, 9963505593, 9591319279

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್. 'ಎ' ಬ್ಲಾಕ್ ಪೂರ್ವ 40x60 ಎಸ್.ಎಸ್. 'ಬಿ' ಬ್ಲಾಕ್ ಉತ್ತರ 40x60, ಶಿವ-ಪಾರ್ವತಿ ಬಡಾವಣೆ ಪೂರ್ವ 30x55, 30x70, 40x70, 40x60, (ಅಕ್ಕ-ಪಕ್ಕ) ಪಶ್ಚಿಮ 30x55, ಬನಶಂಕರಿ ಬಡಾವಣೆ ಪೂರ್ವ-ದಕ್ಷಿಣ ಕಾರ್ನರ್ 30x50, (60 ಅಡಿ ರಸ್ತೆ) ಜೆ.ಹೆಚ್. ಪಟೇಲ್ ಬಡಾವಣೆ (ನಾಗನೂರು ರಸ್ತೆ) ಪೂರ್ವ 30x50
ಐಗೂರು ವಿಜಯಕುಮಾರ
99457 02495

**ಸೈಟು ಮಾರಾಟಕ್ಕಿದೆ**
ಕುಂದುವಾಡದ ತುಂಗಭದ್ರಾ ಬಡಾವಣೆಯಲ್ಲಿ ಉತ್ತರ ಮುಖವುಳ್ಳ 20×30 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಆಸಕ್ತಿಯುಳ್ಳವರು ಮಾತ್ರ ಸಂಪರ್ಕಿಸಿ :
97416 84666, 82177 98233

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ Part time ಕೆಲಸ ಮಾಡಲು ಡ್ರೈವರ್ ಬೇಕಾಗಿದ್ದಾರೆ. ಮೊದಲು ಬಂದವರಿಗೆ ಆದ್ಯತೆ. ಸಮಯ : ರಾತ್ರಿ 7 ರಿಂದ ರಾತ್ರಿ 11ರವರೆಗೆ.
ಮೊ. 97385-23711

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಸೇಲ್ಸ್ ಮೆನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಗ್ರಾಮೀಣ ಪ್ರದೇಶದವರಿಗೆ ಅವಕಾಶ. ವೇತನದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**ಮನೆಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪಶ್ಚಿಮ 30x45 (ಡುಪ್ಲೆಕ್ಸ್) ಎಸ್.ಎಸ್. 'ಬಿ' ಬ್ಲಾಕ್ ದಕ್ಷಿಣ 30x40 (ಡುಪ್ಲೆಕ್ಸ್)
ಐಗೂರು ವಿಜಯಕುಮಾರ
99457 02495

**ಕರ್ನಾಟಕ ಹೌಸಿಂಗ್ ಬೋರ್ಡ್ (KHB) ಸೈಟ್ ಮಾರಾಟಕ್ಕೆ ಕಮರ್ಷಿಯಲ್**
1) 40X60 ಉತ್ತರ 120 ಅಡಿ ರಸ್ತೆಗೆ (85 ಲಕ್ಷ) 2) 30x40 30x50 ಬನ್ನಿಕೋಡ್ 60 ಅಡಿ ರಸ್ತೆಗೆ (40 ಲಕ್ಷ) (45 ಲಕ್ಷ) 3) 40x40 (55 ಲಕ್ಷ) ದಕ್ಷಿಣ ಪಶ್ಚಿಮ ಕಾರ್ನರ್ 60 ಅಡಿ ರಸ್ತೆ ಡಬಲ್ ರೋಡ್‌ಗೆ
ಕಿರಣ್ ಬೂಸ್ನೂರ್ : 98440-63409
ರಿಜಿಸ್ಟರ್ ಖರ್ಚು + ಕಮೀಷನ್ ಸೇರಿ

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, Rate - 2800, 30x40 East, 30x40 North, 40x60 East, 30x50 West, 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಲೀಸ್‌ಗೆ ಇವೆ**
ವಿದ್ಯಾನಗರ, ತರಳಬಾಳು ಬಡಾವಣೆ, ಆಂಜನೇಯ ಬಡಾವಣೆಯಲ್ಲಿ 2 ಬೆಡ್ ರೂಮ್, 3 ಬೆಡ್ ರೂಮ್, ಮೊದಲನೇ ಮಹಡಿಯಲ್ಲಿ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಹುಡುಗರು ಬೇಕಾಗಿದ್ದಾರೆ**
ಕನ್ನಡ ಭಾಷಾ ಜ್ಞಾನ ಮತ್ತು ಟೈಪಿಂಗ್ ಅನುಭವವಿರುವವರು ಬೇಕಾಗಿದ್ದಾರೆ ಸಂಪರ್ಕಿಸಿ : ಬೆಳಿಗ್ಗೆ 11 ರಿಂದ ಸಂಜೆ 5.30ರವರೆಗೆ
08192 254736

**ಮನೆಯ ರೀ ಪೇಟಿಂಗ್**
ಮನೆಯ ಒಳಗಡೆ ಮತ್ತು ಹೊರಗಡೆ ಹೊಸದ ರೀತಿಯಾಗಿ ನಿಮ್ಮ ಇಚ್ಚೆಗೆ ಅನುಗುಣವಾಗಿ ಉತ್ತಮವಾದ ಪೇಂಟ್ ಮಾಡಿ ಕೊಡಲಾಗುವುದು. ದರ ಕಡಿಮೆ ಉತ್ತಮ ಕೆಲಸಕ್ಕಾಗಿ ಸಂಪರ್ಕಿಸಿ :
72046 33302

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ 30x60, 30x60 North ಅಕ್ಕ-ಪಕ್ಕ, 30x45, 30x45 South ಅಕ್ಕ-ಪಕ್ಕ, 40x40 South, 30x45 North-East Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 40x60 ಪೂರ್ವ, 40x60 ಉತ್ತರ, 40x50 ಪೂರ್ವ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಪಶ್ಚಿಮ, ಸರಸ್ವತಿ ಬಡಾವಣೆಯಲ್ಲಿ 40x60 ಉತ್ತರ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**PI ACADEMY**
Crash Courses : 2024-25
Class 10 CBSE / State
Maths & Science
28.03.2024 to 15.05.2024
Sri S. Nijalingappa Layout
99642 29344

**ಬೇಕಾಗಿದ್ದಾರೆ**
ಮನೆಯಲ್ಲಿ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ, ಆಸಕ್ತರು ಸಂಪರ್ಕಿಸಿ, ಭೇಟಿಯ ಸಮಯ : ಬೆಳಿಗ್ಗೆ 11.30 ರಿಂದ ಸಂಜೆ 5 ರವರೆಗೆ. ಸಂಪರ್ಕಿಸಿ :
08192 254736

**HOUSE TO LET**
Real Estate Agent
3 BHK House.
2 BHK House
1 BHK House Available for rent only.
Contact number
80732-43488

**ಮನೆಗಳು ಲೀಸ್‌ಗಿವೆ**
2BHK, 3BHK ಇಂಡಿಪೆಂಡೆಂಟ್ ಹೌಸ್, 5ನೇ ಮೇನ್, 5ನೇ ಕ್ರಾಸ್, ಸೇಂಟ್ ಪಾಲ್ಸ್ ಕಾನ್ವೆಂಟ್ ರೋಡ್ ಪಿ.ಜೆ. ಬಡಾವಣೆ, ದಾವಣಗೆರೆ. ಸಂಪರ್ಕಿಸಿ :
88616 89590

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**2 BHK ಮನೆ ಬಾಡಿಗೆಗೆ ಇದೆ**
2ನೇ ಮಹಡಿ, ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ದಾವಣಗೆರೆ-2.
Only officials
97405 69252

**ಹೆಸರು ಬದಲಾವಣೆ**
ಮಂಜುನಾಥ್ ಕೆ.ಆರ್. ಬಿನ್ ಕೆ. ರಾಜಶೇಖರಪ್ಪ ವಯಸ್ಸು 41 ವರ್ಷ, ಡೋರ್ ನಂ. 1792/6 ಕಲ್ಲೇಶ್ವರ ನಿಲಯ, 1ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ ಇಲ್ಲಿನ ವಾಸಿಯಾದ ನಾನು ನನ್ನ ಅಪ್ರಾಪ್ತ ಮಗನಾದ ಕೆ.ಎಂ. ವಿಕಾಸ್ ಇವನ ಹೆಸರನ್ನು ಹಿತೈಶ್ ನೆಹಾನ್ ಕೆ.ಎಂ. ಎಂದು ಬದಲಾಯಿಸಿ ದಿನಾಂಕ 13.02.2024ರಂದು ದಾವಣಗೆರೆ ನೋಟರಿ ಅವರ ಸಮ್ಮುಖದಲ್ಲಿ ಪ್ರಮಾಣೀಕರಿಸಿರುತ್ತೇನೆ.
ಸಹಿ - ಮಂಜುನಾಥ್ ಕೆ.ಆರ್.

**WANTED**
OM DENTAL CARE
Ram & Co Circle, Davangere.
1) BDS Dentist
2) Staff (Full time & Part Time)
90669 93738

**WE PROVIDE**
ಗಣಿತ/ವಿಜ್ಞಾನ ಕಲಿಕಾ ಸಾಮಗ್ರಿ/ಲ್ಯಾಬ್
Learning KIT
(School and College)
63608 66997

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**CHANGE OF NAME**
I Tinesh Kumar s/o. Narinder Kumar 46 year, Resident @ # 544/30A, 1st Floor, 1st Cross, Yallama Krupa, Davanagere-577 004. Karnataka. Above said name Enters in my name wrongly entered as Tinesh. My name Tinesh Kumar it is Correct and I will Continue the same name in future also. I swear before Notary Davangere on 10.02.2024.
Sd/- Tinesh Kumar

**WANTED**
Sales Eecutives for FMCG-1
Dealers for Flair
Packaged Drinking Water
Shamanur Pharma & Health Care Pvt. Ltd.,
374, 4th main, P.J. Extn. Davangere.
98441 20003

**PI ACADEMY**
Regular Course : 2024-25
Classes 8th, 9th & 10th Std
CBSE Maths & Science
Admission in Progress
Near by Laxmi Flour Mills
99642 29344

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


# ಸಾರ್ವಜನಿಕರ ಗಮನಕ್ಕೆ

ದಾವಣಗೆರೆ ತಾಲ್ಲೂಕು, ಶಾಬನೂರು ಗ್ರಾಮದ ರಿ.ಸರ್ವೆ ನಂಬರ್ 220ರಲ್ಲಿ 30 ಎಕರೆ 30ಗುಂಟೆ ಜಮೀನು ಇರುತ್ತದೆ. ಸದರಿ ಜಮೀನು ಶಾಬನೂರು ಗ್ರಾಮದ ಹನುಮಂತ ದೇವರ ದೇವಸ್ಥಾನಕ್ಕೆ ಸೇರಿದ ಜಮೀನು ಆಗಿರುತ್ತದೆ. ಸದರಿ ಜಮೀನಿನಲ್ಲಿ ಪೂರ್ವ ಭಾಗದ 15 ಎಕರೆ 15 ಗುಂಟೆಯಲ್ಲಿ 05 ಎಕರೆ 15 ಗುಂಟೆ ಜಮೀನು ಪಕ್ಕೀರಪ್ಪ ತಂದೆ ಬಸಪ್ಪ ಮತ್ತು ಶಿವಾನಂದಪ್ಪ ತಂದೆ ಬಸಪ್ಪ ಇವರಿಗೆ ಜಂಟಿಯಾಗಿ, 05 ಎಕರೆ 05 ಗುಂಟೆ ಲಿಂಗಪ್ಪ ತಂದೆ ಹನುಮಪ್ಪ ಮತ್ತು ಭೀಮಪ್ಪ ತಂದೆ ಹನುಮಪ್ಪ ಇವರಿಗೆ ಜಂಟಿಯಾಗಿ, 05 ಎಕರೆ 05 ಗುಂಟೆ ದಂಡಿ ಹನುಮಪ್ಪ ತಂದೆ ಹನುಮಪ್ಪ ಇವರಿಗೆ ಹಾಗು ಪಶ್ಚಿಮ ಭಾಗದ 15 ಎಕರೆ 15 ಗುಂಟೆಯಲ್ಲಿ 02 ಎಕರೆ ಜಮೀನು ಶ್ರೀಮತಿ ಬಸಮ್ಮ ಗಂಡ ಬಡಕ ಹನುಮಪ್ಪ ಮತ್ತು 13ಎಕರೆ 15 ಗುಂಟೆ ಜಮೀನು ಪೂಜಾರಿ ಬಸಪ್ಪ ತಂದೆ ಬಡಕ ಹನುಮಪ್ಪ @ ಹನುಮಂತಪ್ಪ ಇವರಿಗೆ ದಾವಣಗೆರೆ. ಭೂ ನ್ಯಾಯಮಂಡಳಿಯಲ್ಲಿ ದಿನಾಂಕ 05-11-1979ರಲ್ಲಿ ಮಂಜೂರಾಗಿರುತ್ತದೆ. ಅದರಂತೆ ಪಹಣಿ ಮತ್ತು ಮ್ಯುಟೇಶನ್ ಸಹ ಆಗಿರುತ್ತದೆ.

ಸದರಿ ಬಸಮ್ಮ ಗಂಡ ಪೂಜಾರಿ ಹನುಮಪ್ಪ ಇವರ ಎರಡನೆಯ ಹೆಂಡತಿಯ ಮಗಳಾದ ಶ್ರೀಮತಿ ಪೂಜಾರಿ ಗಂಗಮ್ಮ ಇವರು ಅಸಲು ದಾವೆ ಸಂಖ್ಯೆ 98/2014ರಲ್ಲಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ದಾವಣಗೆರೆ ಇವರಲ್ಲಿ ಪಾಲು ವಿಭಾಗಕ್ಕಾಗಿ ಬಸಪ್ಪ @ ಪೂಜಾರಿ, ಬಸಪ್ಪ ಇವರಿಗೆ 05-11-1987ರಲ್ಲಿ ರಿ.ಸರ್ವೆ.ನಂ.220ರಲ್ಲಿ ಪಶ್ಚಿಮ ಭಾಗದಲ್ಲಿ ಮಂಜೂರಾದ ಜಮೀನಿನಲ್ಲಿ ಪಾಲು ಕೇಳಿ ದಾವೆಯನ್ನು ಸಲ್ಲಿಸಿದ್ದಳು. ಸದರಿ ದಾವೆಯಲ್ಲಿ ಶ್ರೀಮತಿ ರಾಮಕ್ಕ ಗಂಡ ಪೂಜಾರಿ ಹೆಗ್ಗಪ್ಪ, ಅವರ ಮಕ್ಕಳು, ಗಂಗಮ್ಮ ಗಂಡ ನಿಂಗಪ್ಪ, ಭೀಮನಗೌಡ ತಂದೆ ಬಸವನಗೌಡ ಮತ್ತು ಅವರ ಮಕ್ಕಳು, ಪೂಜಾರಿ ಭೀಮಪ್ಪ ತಂದೆ ಹನುಮಪ್ಪ ಮತ್ತು ಅವರ ಮಕ್ಕಳು, ಶಾಂತಮ್ಮ ಗಂಡ ಹನುಮಂತಪ್ಪ, ಸಂತೋಷ ತಂದೆ ಬಿಂದಪ್ಪಳ ರಾಮಚಂದ್ರಪ್ಪ, ಪಪಾಟ್ ಲಾಲ್ ಜೈನ್ ಮತ್ತು ಅವರ ಮಕ್ಕಳು, ಬೆಳಗಾವಿ ಬಸವರಾಜಪ್ಪ ತಂದೆ ಷಣ್ಮುಖಪ್ಪ, ತಿಪ್ಪಮ್ಮ ಗಂಡ ಸಂಗಪ್ಪ, ರವಿ ತಂದೆ ಸೋಮಶೇಖರಪ್ಪ, ರೇವಣಸಿದ್ದಪ್ಪ ತಂದೆ ಸೋಮಶೇಖರಪ್ಪ, ಬಸವರಾಜಪ್ಪ ತಂದೆ ಬಿಂದಪ್ಪಳ ಮಹಾದೇವಪ್ಪ, ರೇಣುಕಮ್ಮ ತಂದೆ ಭೀಮಪ್ಪ, ನಾಗರಾಜ ತಂದೆ ಭೀಮಪ್ಪ, ಮಂಜಮ್ಮ ಗಂಡ ನಾಗರಾಜ, ಶಂಕುತಲಮ್ಮ ತಂದೆ ಭೀಮಪ್ಪ, ಮಾರುತಿ ತಂದೆ ಭೀಮಪ್ಪ, ರುದ್ರಮ್ಮ ಗಂಡ ಮಾರುತಿ, ಸಾವಿತ್ರಮ್ಮ ಗಂಡ ಹುಚ್ಚಂಗಪ್ಪ, ಸುಧಾ ಗಂಡ ಲಿಂಗರಾಜು, ಶ್ರೀಮತಿ ದೇವೀರಮ್ಮ ಗಂಡ ಹನುಮಪ್ಪ, ರಾಮಚಂದ್ರಪ್ಪ ತಂದೆ ಹನುಮಪ್ಪ, ಲಿಂಗರಾಜಪ್ಪ ತಂದೆ ಹನುಮಪ್ಪ, ಸಿದ್ದಮ್ಮ ಗಂಡ ಬಸವರಾಜಪ್ಪ, ಸುರೇಶ ತಂದೆ ಬಸವರಾಜಪ್ಪ, ರಾಜಶೇಖರಪ್ಪ ತಂದೆ ಸಂಗಪ್ಪ, ಅಮರನಾಥ ತಂದೆ ವಿಠಲ, ಅರುಣ್ ಕುಮಾರ ತಂದೆ ಮಹೇಶ್ವರಪ್ಪ, ಮಹೇಂದ್ರ ತಂದೆ ಬಂದಪ್ಪಳ ಬಸವರಾಜಪ್ಪ ಇವರುಗಳೆಲ್ಲರೂ ಸದರಿ ಪೂಜಾರಿ ಬಸಪ್ಪನ ವಾರಸುದಾರರಿಂದ ಪಶ್ಚಿಮ ಭಾಗದ 13 ಎಕರೆ 15 ಗುಂಟೆ ಜಮೀನನ್ನು ಖರೀದಿ ಮಾಡಿದ್ದಾರೆ ಎಂದು ಸದರಿ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದಳು. ಸದರಿ ಅಸಲು ದಾವೆ 98/2014 ಪೂರ್ಣ ವಿಚಾರಣೆಯಾದ ನಂತರ ಪೂಜಾರಿ ಗಂಗಮ್ಮನಿಗೆ ಹಕ್ಕು ಇರುವುದಿಲ್ಲ ಎಂದು ದಾವೆಯು ವಜಾ ಆಗಿರುತ್ತದೆ, ಸದರಿ ತೀರ್ಪಿನ ವಿರುದ್ಧ ಪೂಜಾರಿ ಗಂಗಮ್ಮ ಇವರು ಯಾವುದೇ ಆಪೀಲನ್ನು ಸಲ್ಲಿಸಿರುವುದಿಲ್ಲ.

ಮೇಲ್ಕಂಡ ನಮ್ಮಗಳಿಗೆ ಇತ್ತೀಚಿಗೆ ತಿಳಿದು ಬಂದ ವಿಷಯವೇನೆಂದರೆ ಶ್ರೀಮತಿ ಪಾರ್ವತಮ್ಮ ಗಂಡ ಪ್ರಭಾಕರ್ ಶಿವಮೊಗ್ಗ ಮತ್ತು ಇತರರು ದಾವಣಗೆರೆಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಆಸಲು ದಾವೆ ಸಂಖ್ಯೆ 207/2016ರನ್ನು ಪಾಲು ವಿಭಾಗಕ್ಕಾಗಿ ಸಲ್ಲಿಸಿ, ಶಾಮನೂರು ಗ್ರಾಮದ ರಿ.ಸರ್ವೆ.ನಂ.220ರ ಪಶ್ಚಿಮ ಭಾಗದ 13 ಎಕರೆ 15 ಗುಂಟೆ ಜಮೀನಿಗೆ ತೀರ್ಪನ್ನು ಪಡೆದಿರುತ್ತಾರೆ ಮತ್ತು ಅಂತಿಮ ತೀರ್ಪನ್ನೂ ಸಹ ಪಡೆದಿರುತ್ತಾರೆ ಸದರಿ ದಾವೆಯನ್ನು ಮೇಲ್ಕಂಡ ನಮ್ಮಗಳನ್ನು ಪಾರ್ಟಿಗಳನ್ನಾಗಿ ಮಾಡದೇ ನ್ಯಾಯಾಲಯಕ್ಕೆ ಮೋಸ ಮಾಡಿ ಪಡೆದ ತೀರ್ಪು ಆಗಿರುತ್ತದೆ. ಸದರಿ ತೀರ್ಪಿನ ವಿರುದ್ಧ ಖರೀದಿದಾರರಾದ ನಾವುಗಳು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸದರಿ ಅಸಲು ದಾವೆ 207/2016 ಮತ್ತು ಎಫ್.ಡಿ.ಪಿ 52/2018ರಲ್ಲಿ ಆದ ತೀರ್ಪನ್ನು ಪ್ರಶ್ನಿಸಿ ಅಪೀಲನ್ನು ಸಲ್ಲಿಸಿರುತ್ತೇವೆ.

ವಂಶ ವೃಕ್ಷಕ್ಕೆ ಸಂಬಂಧ ಪಟ್ಟಂತೆ, ಅವರ ಅಜ್ಜನಾದ ಬಸಪ್ಪನ ಮಕ್ಕಳಾದ ಪಕ್ಕೀರಪ್ಪ ಮತ್ತು ಶಿವಾನಂದಪ್ಪನ ಜಮೀನಿನಲ್ಲಿ ಪಾಲು ಪಡೆಯಲು ದಾವೆಯನ್ನು ಸಲ್ಲಿಸಿದ ಪೂಜಾರಿ ಬಸಪ್ಪ ತಂದೆ ಬಡಕ ಹನುಮಪ್ಪ @ ಹನುಮಂತಪ್ಪ ಇವರಿಗೆ ಮಂಜೂರಾದ 13 ಎಕರೆ 15 ಗುಂಟೆ ಜಮೀನು ಕೇಸಿನಲ್ಲಿ ಸೇರಿಸಿ ತೀರ್ಪು ಮತ್ತು ಡಿಕ್ರಿಯನ್ನು ಪಡೆದಿರುತ್ತಾರೆ.

ದಾವೆ 207/2016ರಲ್ಲಿ ದಾವೆಯನ್ನು ಸಲ್ಲಿಸುವಾಗ ಹಳೆಯ ಪಹಣಿಯನ್ನು ನೀಡಿದ್ದು ಹೊಸ ಪಹಣಿಗಳು ಯಾರ ಹೆಸರಿನಲ್ಲಿ ಇವೆ ಎಂಬುದನ್ನು ನ್ಯಾಯಾಲಯಕ್ಕೆ ತಿಳಿಸಿರುವುದಿಲ್ಲ ಮತ್ತು ಹಾಜರು ಪಡಿಸಿರುವುದಿಲ್ಲ ಹಾಗು ಸದರಿ ಪಾರ್ವತಮ್ಮ ತಮ್ಮ ವಂಶಕ್ಕೆ ಸೇರಿದ ಪಹಣಿಗಳನ್ನು ಸದರಿ ದಾವೆಯಲ್ಲಿ ಹಾಕಿದ್ದು ಆದರೆ ಪೂಜಾರಿ ಬಸಪ್ಪ ತಂದೆ ಹನುಮಪ್ಪನ ಜಮೀನಿಗೆ ಡಿಕ್ರಿಯನ್ನು ತೆಗೆದುಕೊಂಡಿರುತ್ತಾರೆ.

ಅಸಲು ದಾವೆ 52/2016ರ ಪಾರ್ವತಮ್ಮ ಮತ್ತು ಇತರರು ಪೂಜಾರಿ ಬಸಪ್ಪ ತಂದೆ ಪೂಜಾರಿ ಹನುಮಪ್ಪ @ ಬಡಕ ಹನುಮಪ್ಪ ಇವರ ವಂಶಕ್ಕೆ ಸೇರಿದವರಲ್ಲ. ಪೂಜಾರಿ ಬಸಪ್ಪ ತಂದೆ ಹನುಮಪ್ಪ ಯಾನೆ ಬಡಕ ಹನುಮಪ್ಪನಿಗೆ ರಾಮಕ್ಕ ಮತ್ತು ಪಾರ್ವತಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಇದ್ದು ಅವರಿಗೆ ಪೂಜಾರಿ ಬಸಪ್ಪ ತಂದೆ ಹನುಮಪ್ಪ ತನಗೆ ರಿ.ಸರ್ವೆ.220ರ ಪಶ್ಚಿಮ ಭಾಗದ 13 ಎಕರೆ 15 ಗುಂಟೆ ಜಮೀನನ್ನು ಬಸಪ್ಪ ಜೀವಂತವಾಗಿರುವಾಗಲೇ ತನ್ನ ಹೆಣ್ಣು ಮಕ್ಕಳಿಗೆ ವಿಲ್ ಮೂಲಕ ಕೊಟ್ಟಿದ್ದಾನೆ. ಮತ್ತು ಬಸಪ್ಪ ಹೆಣ್ಣು ಮಕ್ಕಳು ಅವರ ಭಾಗಕ್ಕೆ ಬಂದ ಜಮೀನನ್ನು ಈ ಕೇಸಿನ ದೂರುದಾರರಿಗೆ ಬಹಳ ಹಿಂದೆಯೇ ಮಾರಾಟ ಮಾಡಿದ್ದು, ನಮ್ಮಗಳ ಹೆಸರಿಗೆ ಕ್ರಯಪತ್ರಗಳು, ಪಹಣಿಗಳು ಇರುತ್ತವೆ. ಹಾಗು ನಾವುಗಳು ಈಗಾಗಲೇ ಕೆಲವರು ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಜಮೀನನ್ನು ಪರಿವರ್ತನೆ ಮಾಡಿ ಸೈಟುಗಳನ್ನಾಗಿ ವಿಂಗಡಿಸಿ ಮಾರಾಟ ಮಾಡಿದ್ದು ಅದರಲ್ಲಿ ಕ್ರಯಕ್ಕೆ ಪಡೆದ ಕೆಲವರು ಮನೆಗಳನ್ನೂ ಸಹ ನಿರ್ಮಿಸಿಕೊಂಡು ವಾಸವಾಗಿದ್ದಾರೆ. ಈ ಎಲ್ಲಾ ಸತ್ಯಾಂಶಗಳು ಸದರಿ ಪಾರ್ವತಮ್ಮ ಮತ್ತು ಇತರರಿಗೆ ಗೊತ್ತಿದ್ದರೂ ಸಹ ದೂರುದಾರರಾದ ನಮ್ಮಗಳಿಗೆ ತೊಂದರೆ ಕೊಟ್ಟು ನಮ್ಮ ಜಮೀನಿಗೆ ಸುಳ್ಳು ತೀರ್ಪನ್ನು ಪಡೆದಿದ್ದು, ಸದರಿ ಜಮೀನನ್ನು ಈಗಾಗಲೇ ಮಾರಾಟ ಮಾಡಲು ಪ್ರಯತ್ನ ಮಾಡಿದ್ದಾರೆ.

ಆದ್ದರಿಂದ ಸದರಿ ಅಸಲು ದಾವೆ, ನಂ.207/2016ರಲ್ಲಿ ಇರುವ ಪಾರ್ಟಿಗಳು ರಿ.ಸರ್ವೆ ನಂ. 220ರ ಪಶ್ಚಿಮ ಭಾಗದ 13 ಎಕರೆ 15 ಗುಂಟೆ ಜಮೀನನ್ನು ಮಾರಾಟ ಮಾಡಲು ಪ್ರಯತ್ನ ಪಟ್ಟಿರುವುದು ನಮ್ಮಗಳ ಗಮನಕ್ಕೆ ಬಂದಿರುತ್ತದೆ.

ಆದ್ದರಿಂದ ನಾವುಗಳು ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸದರಿ ಅಸಲು ದಾವೆ, ನಂ.207/2016ರಲ್ಲಿರುವ ಪಕ್ಷಗಾರರಿಗೆ ಪಶ್ಚಿಮ ಭಾಗದ 13 ಎಕರೆ 15 ಗುಂಟೆ ಜಮೀನನ್ನು ಮಾರಾಟ ಮಾಡಲು ಯಾವುದೇ ಅಧಿಕಾರ ಮತ್ತು ಹಕ್ಕು ಇರುವುದಿಲ್ಲ ಹಾಗು ಕರ್ನಾಟಕ ಉಚ್ಚ ನಾಯಾಲಯದಲ್ಲಿ ಸದರಿ ಅಸಲು ದಾವಾ 207/2016 ಮತ್ತು ಎಸ್.ಡಿ.ಪಿ.ನಂ.52/2018ರಲ್ಲಿ ಆದ ತೀರ್ಪನ ವಿರುದ್ಧ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಶ್ರೀಯುತ ಜಿ.ಎಚ್.ರಾಮಚಂದ್ರಪ್ಪ ಹಾಗು ಇತರರು ಆರ್.ಎಸ್.ಎ.ನಂಬರ್.12/2023 ಮತ್ತು ಆರ್.ಎಫ್.ಎಫ್. ನಂಬರ್.16/2023 ಪೆಂಡಿಂಗ್ ಇರುತ್ತವೆ. ಆದ್ದರಿಂದ ಸದರಿ ಜಮೀನಿನ ಬಗ್ಗೆ ಸಾರ್ವಜನಿಕರು ಯಾವುದೇ ರೀತಿಯ ಕ್ರಯ ಅಥವಾ ಕ್ರಯದ ಕರಾರು ಮತ್ತು ಇನ್ನಿತರೆ ರೀತಿಯ ಪರಭಾರೆಯನ್ನು ಮಾಡಬಾರದು ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

ದಿನಾಂಕ : 09.02.2024
ದಾವಣಗೆರೆ.

ಸಹಿ/-
ಎನ್. ಶಿವಲಿಂಗಪ್ಪ, ಬಿಎಲ್‌ಎಲ್‌ಬಿ., ವಕೀಲರು,
ಬಾಳೆಹೊಲದ ಹೌಸ್, #1663/46, 10ನೇ ಕ್ರಾಸ್,
ಸಿದ್ದವೀರಪ್ಪ ಬಡಾವಣೆ, ದಾವಣಗೆರೆ-4.

# ಪ್ರೇಮಿಗಳ ದಿನ...ಸೈನಿಕನದೊಂದು ಸಂದೇಶ...

**ತಮ್ಮ ಉಸಿರನ್ನು ಪಣಕ್ಕಿಟ್ಟು ರಣರಂಗದಲ್ಲಿ ಕೆಚ್ಚದೆಯಿಂದ ಹೋರಾಡುವ ಯೋಧರು ನಮ್ಮ ಸುಖ ನಿದ್ರೆಯ ನೆಮ್ಮದಿಗೆ ಕಾರಣಕರ್ತರು...**



ದಿನಗಳು ಕಳೆಯುತ್ತಿವೆ... ಮಾಸಗಳು ಉರುಳುತ್ತಿವೆ... ವರ್ಷಗಳು ಮಾಯವಾಗುತ್ತಿವೆ. ಫೆ. 14 ಕಪ್ಪು ದಿನ ಮೌನವಾಗಿ ಉಳಿದಿದೆ. ಇಂದು ಪ್ರೇಮಿಗಳ ದಿನವೇ?..., ಅಲ್ಲಾ, 40 ಕುಟುಂಬಗಳ ಪ್ರೇಮಾಘಾತವಾದ ದಿನ. ಫೆ. 07 ಗುಲಾಬಿ ದಿನದಂದು ಪ್ರೇಮಿಗಳಿಗೆ ಗುಲಾಬಿ ಕೊಡುವ ಬದಲು ಹುತಾತ್ಮರಾದ ಸೈನಿಕರಿಗೆ ಸಲ್ಲಿಸಿ, ಅದು ಅವರ ಕೊರಳಿಗೆ ಹಾರವಾಗಿ ಬದಲಾಯಿತು... ಫೆ. 08 ಪ್ರೊಪೋಸ್ ದಿನದಂದು ಐ ಲವ್ ಯು ಎಂದು ಹೇಳುವ ಬದಲು ಹುತಾತ್ಮರಾದ ಯೋಧರಿಗೆ 'ಜೈ ಹಿಂದ್' ಎಂದು ಹೇಳಿದರೆ ಆ ಯೋಧರ ಆತ್ಮಕ್ಕೆ ಶಾಂತಿ ಸಿಕ್ಕಿತು. ಫೆ. 09 ಚಾಕಲೇಟಿನ ದಿನದಂದು ಬಾಯಿ ಸಿಹಿ ಮಾಡಿಕೊಳ್ಳುವ ಮೊದಲು ಆ ವೀರಯೋಧರ ಕುಟುಂಬದ ಪರಿಸ್ಥಿತಿಯನ್ನು ಯೋಚಿಸಿ... ಫೆ. 10 ಗೊಂಬೆಯ (Teddy Day) ದಿನವನ್ನು ಆಚರಿಸುವ ಮೊದಲು ಗೊಂಬೆಯಂತಹ ತನ್ನ ಮಕ್ಕಳನ್ನು ಲೆಕ್ಕಿಸದೆ ದೇಶದ ರಕ್ಷಣೆಗೆ ಪ್ರಾಣ ತೆತ್ತ ವೀರ ಯೋಧನ ಸಾಹಸ ನೆನೆದರೆ ನೀವೇ ಸೈನಿಕನಾಗಬೇಕೆಂಬ ಛಲ ಉದ್ಭವಿಸುವುದು. ಫೆ. 11 ವಚನ (Promise) ದಿನದಂದು ಪ್ರೀತಿ, ಪ್ರೇಮಗಳ ವಚನ ಸ್ವೀಕರಿಸುವುದಕ್ಕಿಂತ ಒಬ್ಬ ಭಾರತೀಯ ಯೋಧನಾಗಿ ಎಂತಹ ಸಂಕಷ್ಟದಲ್ಲೂ ದೇಶಕ್ಕಾಗಿ ನಾನು ಪ್ರಾಣ ಕೊಡಲು ಸಿದ್ದನಾಗಿರುತ್ತೇನೆ ಎಂದು ಭರವಸೆದಾಯಕ ವಚನ ನೀಡುವ ಆ ಯೋಧನ ವಚನ ಸರ್ವಶ್ರೇಷ್ಠವಾದದ್ದೆಂದು ಮನದಟ್ಟು ಮಾಡಿಕೊಳ್ಳಿ. ಫೆ. 12 ತಬ್ಬಿಕೊಂಡು ಮುದ್ದಾಡುವ ಪ್ರೇಮಿಗಳೇ ಒಮ್ಮೆ ವೀರ ಮರಣ ಹೊಂದಿದ ಸೈನಿಕನನ್ನು ತಬ್ಬಿ ರೋಧಿಸುತ್ತಿರುವ ಅವರ ಕುಟುಂಬದ ನೋವನ್ನು ಅರಿಯಿರಿ... ತಬ್ಬಿದ ಎರಡು ಹೃದಯಗಳ ಕುಗ್ಗಿ ಸಿಡಿಮದ್ದಿನಂತೆ ಸ್ಫೋಟಗೊಳ್ಳುವುದು. ಫೆ. 13 ಮುತ್ತಿನ ದಿನವೆಂದು ನೀವು ಭಾವಿಸಿದರೆ ತಪ್ಪು. ಆತಂಕವಾದಿಗಳು ನಮ್ಮ ಯೋಧರ ಮೇಲೆ ಮುತ್ತಿಗೆ ಹಾಕಿದ ದಿನ. ಫೆ .14 ಪ್ರೇಮಿಗಳ ದಿನವೆಂದು ನೀವು ತಿಳಿದರೆ ಅಂದು ತಮ್ಮ ಪ್ರಾಣಕ್ಕಿಂತ ಹೆಚ್ಚು ದೇಶ ಪ್ರೇಮವನ್ನೊಳಗೊಂಡ ಯೋಧರು ಹುತಾತ್ಮರಾದ ದಿನ. ಜಗತ್ತಿನಲ್ಲಿ ತಂದೆ, ತಾಯಿಯ ಪ್ರೇಮಕ್ಕಿಂತಲೂ ಶ್ರೇಷ್ಠವಾದ ಪ್ರೇಮ ಇನ್ನೊಂದಿಲ್ಲ ಎಂದು ಭಾವಿಸಿದರೆ ದೇಶಪ್ರೇಮ ಅದಕ್ಕೂ ಮಿಗಿಲಾದದ್ದು. ಒಬ್ಬ ತಾಯಿ ತನ್ನ ಮಕ್ಕಳನ್ನು ಒಂಬತ್ತು ತಿಂಗಳು ಸಲಹಿದರೆ ಜೀವನ ಪರ್ಯಂತ ನಮ್ಮೆಲ್ಲರನ್ನೂ ಸಲಹಿ ಸಾಕುತ್ತಿರುವವಳು ಭಾರತಾಂಬೆ, ದೇಶದ ರಕ್ಷಣೆ ನಮ್ಮೆಲ್ಲರ ಹೊಣೆ. ಸ್ನೇಹಿತರೇ ಪ್ರೇಮಿಗಳ ದಿನವನ್ನು ಆಚರಿಸಲು ನಾವು ಗಳಿಸಿದ್ದು ಪ್ರೀತಿಯನ್ನಲ್ಲ, ಸಾವು ನೋವುಗಳು, ಯುವಕ - ಯುವತಿಯರೇ ಪ್ರೇಮಿಗಳ ದಿನದಂದು ದೇಶಪ್ರೇಮ ಹೆಚ್ಚಬೇಕೇ ವಿನಃ ನಮ್ಮಲ್ಲಿರುವ ಕಾಮ, ಕ್ರೋಧ, ಮೋಹವಲ್ಲ. ಪ್ರೇಮಿಗಳ ಪ್ರೇಮ ಸಾಯು ವವರೆಗೆ ಆದರೆ ದೇಶಪ್ರೇಮ ಹುತಾತ್ಮನಾದರೂ ಅನೇಕ ಜನ ಮನಗಳಲ್ಲಿ ಹಸಿರಲ್ಲಿ ಉಸಿರಾಗಿ ರಾರಾಜಿಸುತ್ತದೆ.

**- ವೀರಭದ್ರ ಸ್ವಾಮಿ ಕೆ. ವಿ.**
(ಭಾರತೀಯ ನೌಕಾಪಡೆ) ಕಮ್ಯುನಿಕೇಟರ್

## ಕಮ್ಮಾರಗಟ್ಟೆ ಹಾಲು ಉತ್ಪಾದಕರ ಸಂಘಕ್ಕೆ ಆಯ್ಕೆ



ಸಾಸ್ವೆಹಳ್ಳಿ, ಫೆ. 13- ಹೊನ್ನಾಳಿ ತಾಲ್ಲೂಕು ಸಾಸ್ವೆಹಳ್ಳಿ ಸಮೀಪದ ಕಮ್ಮಾರಗಟ್ಟೆಯ ಹಾಲು ಉತ್ಪಾದಕರ ಸಂಘಕ್ಕೆ ಮೂರನೇ ಬಾರಿ ಅಧ್ಯಕ್ಷರಾಗಿ ಕೆ.ಪಿ. ರುದ್ರೇಶ್, ಉಪಾಧ್ಯಕ್ಷರಾಗಿ ಡಿ.ಪಾರ್ವತಮ್ಮ ಆಯ್ಕೆಯಾಗಿದ್ದಾರೆ.

ನಿರ್ದೇಶಕರಾಗಿ ಹೆಚ್.ಕೆ. ವೆಂಕಟೇಶ್ ಶೆಟ್ಟಿ, ಬಿ.ಮಂಜಪ್ಪ, ಕೆ.ಎಂ. ತಿಪ್ಪೇಸ್ವಾಮಿ, ಕಲ್ಲಪ್ಪ, ಎಂ.ಹೆಚ್.ಮಹೇಶ್ವರಪ್ಪ, ರುದ್ರನಾಯ್ಕ, ಟಿ.ಹನುಮಂತಪ್ಪ, ಎ. ಶಾರದಮ್ಮ ಆಯ್ಕೆಗೊಂಡಿದ್ದಾರೆ ಎಂದು ಚುನಾವಣಾಧಿಕಾರಿ ನವೀನ್ ಕುಮಾರ್ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಕಾರ್ಯದರ್ಶಿ ಬಿ.ಹೆಚ್. ನಟರಾಜ್ ಮತ್ತಿತರರು ಉಪಸ್ಥಿತರಿದ್ದರು.

## ಚನ್ನಗಿರಿಯಲ್ಲಿ ಇಂದು ಲೋಕಾಯುಕ್ತ ಪೊಲೀಸರಿಂದ ಅಹವಾಲು ಸ್ವೀಕಾರ

ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್. ಕೌಲಾಪೂರೆ ಅವರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11.30ರಿಂದ 1.30ರವರೆಗೆ ಚನ್ನಗಿರಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲಾಗುವುದು.

## ಜಗವೇ ಒಂದಾಗುವ ಪರಿ...ಈ ಪ್ರೀತಿ...

ಪ್ರೇಮಿಗಳಿಗೂ ಒಂದು ದಿನವಂತೆ
ನಿಜವಾದ ಪ್ರೀತಿಗೆ ಫೆಬ್ರವರಿ
ಹದಿನಾಲ್ಕೇ ಯಾಕಂತೆ?
ವರುಷದ ಎಲ್ಲಾ ದಿನಗಳೂ
ಪ್ರೀತಿ ಹರಿಯುತಿರಲಿ ಹೊಳೆಯಂತೆ!
ಪ್ರೀತಿಯಿಂದಲೇ ಜೀವನ
ಪ್ರೀತಿಯಿಲ್ಲದೇ ಬದುಕಿದ್ದೂ ಸತ್ತಂತೆ!!
ಮನುಜ ಮನುಜರೆಡೆಗಿನ ಪ್ರೀತಿ
ಪ್ರಾಣಿಪಕ್ಷಿಗಳೆಡೆಗಿನ ಪ್ರೀತಿ
ಸರ್ವರೆಡೆಗಿನ ಪ್ರೀತಿ
ಹರಿಯಬಿಡಿ ಭೋರ್ಗರೆದು
ತಾಳ ತಪ್ಪದಂತೆ!
ಆಗ ನೋಡಿ,ಬದುಕೇ ವಿಸ್ಮಯ!
ಜಗವೇ ಪ್ರೀತಿಯೊಳು ಒಂದಾದಂತೆ!!
ಹೃದಯ ಹಗುರ, ಮನಸು ಮಧುರ
ಝೇಂಕರಿಸುವ ದುಂಬಿಯಂತೆ!
ಒಲವೇ, ನೀನಾರಿಗಾದೆ?
ಅಪ್ಪಿಕೋ..ಮರವ ತಬ್ಬುವ ಬಳ್ಳಿಯಂತೆ!
ವರುಷವೆಲ್ಲವೂ ಹಂಚಿಕೋ..ಪ್ರೀತಿಯ,
ಸರ್ವರ ಮನೆ ಮನ ಬೆಳಗಿಸುವಂತೆ!
ಆಗ ನಿನ್ನೊಲವೇ ಪರಿಶುದ್ಧ ಚಿನ್ನದಂತೆ!

**- ಮಂಜುಳಾ ಪ್ರಸಾದ್**, ದಾವಣಗೆರೆ.

## 24ನೇ ವಾರ್ಡ್‌ನ ಬೂತ್‌ಗಳಲ್ಲಿ ಗ್ರಾಮ ಚಲೋ ಅಭಿಯಾನಕ್ಕೆ ಚಾಲನೆ

### ಎಸ್.ಎ. ರವೀಂದ್ರನಾಥ್, ಶಿವಯೋಗಿಸ್ವಾಮಿ ಮತ್ತು ಅತಿಥ್ ಅಂಬರ್‌ಕರ್ ಕಾರ್ಯಕ್ರಮದಲ್ಲಿ ಭಾಗಿ



ದಾವಣಗೆರೆ ಫೆ. 13 - ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ 24ನೇ ವಾರ್ಡ್‌ನ ಬೂತ್‌ಗಳಲ್ಲಿ ಗ್ರಾಮ ಚಲೋ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ವಾರ್ಡ್‌ನ ಮನೆ ಮನೆಗೆ ಭೇಟಿ ನೀಡಿ 'ಮೋದಿ ಮತ್ತೊಮ್ಮೆ' ಗೋಡೆ ಬರಹದೊಂದಿಗೆ ನೆಚ್ಚಿನ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಸಾಧನೆ ಕುರಿತು ಕರಪತ್ರಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಮಾಜಿ ಮುಖ್ಯ ಸಚೇತಕ ಶಿವಯೋಗಿ ಸ್ವಾಮಿ, ಬಿಜೆಪಿ ಮಾಜಿ ರಾಜ್ಯ ಕಾರ್ಯದರ್ಶಿ ಶ್ರೀಮತಿ ಸುಧಾ ಜಯರುದ್ರೇಶ್, 24ನೇ ವಾರ್ಡ್‌ನ ಮಹಾನಗರ ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್, ಯುವ ನಾಯಕ, ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಅತಿಥ್ ಅಂಬರ್‌ಕರ್ ಬೂತ್ ಅಧ್ಯಕ್ಷರು, ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಜಾಹೀರಾತು


**ಬೇಕಾಗಿದ್ದಾರೆ**
ದಾವಣಗೆರೆ ಹೆಸರಾಂತ ಜ್ಯೂಯಲರಿ ಶೋರೂಂನಲ್ಲಿ ಕೆಲಸ ಮಾಡಲು ಅನುಭವವುಳ್ಳ ಯುವಕ/ಯುವತಿಯರು ಬೇಕಾಗಿದ್ದಾರೆ. ಸಂಪರ್ಕಿಸಿ:
ರವಿ ಜ್ಯೂಯಲರ್ಸ್, ಮಂಡಿಪೇಟೆ, ದಾವಣಗೆರೆ
ಮೊ: 99649 32113

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೋರ್ ಪಾಯಿಂಟ್ ಮಾಡಲಾಗುತ್ತದೆ.**
ಸಂಪರ್ಕಿಸಿ
ಮೊ : 8151977052

**ಷೇರ್ ಸರ್ಟಿಫಿಕೇಟ್ ಕಳೆದಿದೆ**
ಹೊನ್ನಾಳಿ ತಾಲ್ಲೂಕು ಕೂಲಂಬಿ ಗ್ರಾಮದ ವಾಸಿ ಆಂಜನೇಯ ಹೆಚ್.ಎಂ. ಬಿನ್ ಲೇಟ್ ಹೆಚ್. ಮುರಿಗೇಂದ್ರಪ್ಪ ಎಂಬ ಹೆಸರಿನ ದಾವಣಗೆರೆ ಷುಗರ್ ಮಿಲ್ಸ್ ಕುಕ್ಕುವಾಡ, ದಾವಣಗೆರೆ ಇದರ ಷೇರ್ ಸರ್ಟಿಫಿಕೇಟ್ ಮನೆ ಸ್ವಚ್ಛಗೊಳಿಸುವಾಗ ಕಳೆದಿದೆ, ಯಾರಿಗಾದರೂ ಸಿಕ್ಕರೆ ಈ ಕೆಳಗಿನ ಮೊಬೈಲ್ ಸಂಖ್ಯೆಗೆ ಕರೆ ಮಾಡಿ ತಿಳಿಸುವಂತೆ ಕೋರಿದೆ. ಆಂಜನೇಯ ಹೆಚ್.ಎಂ.
91644 35329

**WANTED**
Freshers for Auditor Office
(Gents Only)
86180 47131

**ಬಾಡಿಗೆಗೆ / ಲೀಸ್‌ಗೆ ಇದೆ.**
ಚಾಲ್ತಿಯಲ್ಲಿರುವ ಪೆಟ್ರೋಲ್ ಬಂಕ್ ಬಾಡಿಗೆಗೆ / ಲೀಸ್‌ಗೆ ಇದೆ. ಸಂಪರ್ಕಿಸಿ
88842 34553

**ಮನೆಬಾಡಿಗೆ**
1 BHK ಸಸ್ಯಾಹಾರಿ ಮಾತ್ರ ಪೂರ್ವ ಮುಖ, ನೆಲ ಮಾಳಿಗೆ ಶಂಕರಲೀಲಾ ಕಲ್ಯಾಣ ಮಂಟಪ ರಸ್ತೆ ಪಾರ್ಕ್ ಎದುರು, ಬೋರ್ / ಮುನ್ಸಿಪಲ್ ವಾಟರ್, ಪಶ್ಚಿಮ ಮುಖ, MCC B ಬ್ಲಾಕ್, ಡಿ.ವಿ.ಜಿ.
96636 88803

**STAFF NURSES VACANCY**
1) Senior nurses (GNM) - 3, OBG & Pead exp. 2) Junior nurses (GNM) 5 Freshers prefered
3) Reception / Lab Technician-2
Mathruchaaya Health Care
Shamanur road, Dvg.
78298 08443,97427 62462

**ಹೋಟೆಲ್ ಉದ್ಯಮಕ್ಕೆ ಕೆಲಸಗಾರರು ಬೇಕಾಗಿದ್ದಾರೆ**
ಕ್ಲರ್ಕ್ಸ್ ಇನ್
ಶಾಮನೂರು ರಸ್ತೆ, ದಾವಣಗೆರೆ.
70190 51306

**ಕೆಲಸಕ್ಕೆ ಬೇಕಾಗಿದ್ದಾರೆ**
ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
98452 63750
80880 24135

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸಕ್ಕೆ ಯುವಕರು ಬೇಕಾಗಿದ್ದಾರೆ. ಅನುಭವ ಉಳ್ಳವರಿಗೆ ಅವಕಾಶವಿದ್ದು,14 ಸಾವಿರ ರೂ. ವೇತನ ಹಾಗೂ ಇನ್ಸೆಂಟಿವ್ ನೀಡಲಾಗುವುದು. ಆಸಕ್ತರು ಸಂಪರ್ಕಿಸಿ :
ಶ್ರೀ ವಾಸವಿ ಮೆಡಿಕಲ್ ಎಂಪೋರಿಯಮ್ ಪಿ.ಜೆ.ಬಡಾವಣೆ,ದಾವಣಗೆರೆ.
94488 31396

**ಮನೆ ಬಾಡಿಗೆಗೆ/ ಲೀಸ್‌ಗೆ ಇದೆ**
2 ಬೆಡ್ ರೂಮ್ , ಹಾಲ್, ಕಿಚನ್ ಉಳ್ಳ ಮನೆ 1ನೇ ಮಹಡಿನಲ್ಲಿ ಬಾಡಿಗೆ /ಲೀಸ್‌ಗೆ ಇದೆ ವಿಚಾರಿಸಿ. ವಿಳಾಸ : ಎಂ.ಸಿ.ಸಿ. 'ಎ' ಬ್ಲಾಕ್ ಪುರಂತರ ಆಸ್ಪತ್ರೆ ಹತ್ತಿರ.
88619 94260

**HOTEL WORK**
( FOOD ) ಫುಡ್ ಕೌಂಟರ್ ಕೆಲಸ ಮಾಡಲು ಬೇಕಾಗಿದ್ದಾರೆ ಆಕರ್ಷಕ ಸಂಬಳ. ಸಂಪರ್ಕಿಸಿ :
+91- 81475 47421

**ಬೇಕಾಗಿದ್ದಾರೆ**
ಮೆಡಿಕಲ್ ಫಾರ್ಮದಲ್ಲಿ ಕಂಪ್ಯೂಟರ್ ಬಿಲ್ ಮಾಡಲು ಅನುಭವವಿರುವ ಮಹಿಳೆ - 1, ಅಂಗಡಿ ಕೆಲಸಕ್ಕೆ - PUC ಆದ ಹುಡುಗ - 1 ಬೇಕಾಗಿದ್ದಾರೆ.
Saavalagi Pharmaceuticals, Hadadi Road, Davanagere.
94484 24185

**ಸೇಲ್ಸ್ & ಮಾರ್ಕೆಟಿಂಗ್**
ಸೇಲ್ಸ್ & ಮಾರ್ಕೆಟಿಂಗ್ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ. ವಯೋಮಿತಿ-20 ರಿಂದ 30 ವರ್ಷ ಒಳಗೆ
ಸುವೀ ಇಂಡಸ್ಟ್ರೀಸ್
ಕರೂರು ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
96206 38679

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**FURNISHED HOUSE TO LET**
3BHK, Big hall, Varanda, Pooja, Kitchen, Store, Bath, Front sit-out, Kian Arun Nilaya 1st floor # 1646/31, 13th main, BIET Road, Opp Dvg-Harihara Urban Bank Ltd.
98444 99799

**ಹೋಟೆಲ್ ಕೆಲಸಕ್ಕೆ**
ಅನುಭವವುಳ್ಳ ದೋಸೆ ಭಟ್ಟರು, ಟೀ-ಕಾಫಿ ಮಾಡುವವರು, ಸಪ್ಲೈಯರ್ ಗಳು, ಕೌಂಟರ್ ಹುಡುಗರು, ಕ್ಲೀನರ್ ಗಳು, ಚಾಟ್ಸ್ ಮಾಡುವವರು, ಹೆಲ್ಪರ್ ಗಳು ಬೇಕಾಗಿದ್ದಾರೆ.
95350 35660, 63646 64518

**ಮಾವಿನ ತೋಟ ಖೇಣಿಗಿದೆ**
ಹೂವು ಬಿಟ್ಟ 500 ಮಾವಿನ ಮರಗಳು ದೊಡ್ಡಬಾತಿ, ದಾವಣಗೆರೆ, ಹರಿಹರ ರೋಡ್
90196 11201

**ಕೆಲಸಕ್ಕೆ ಬೇಕಾಗಿದ್ದಾರೆ**
ಹೋಲ್‌ಸೇಲ್ (ಸಗಟು) ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ದಾವಣಗೆರೆ ನಗರದಲ್ಲಿ ಹಾಗೂ ನಗರದಿಂದ ಹೊರಗೆ (ಔಟ್ ಸ್ಟೇಷನ್) ಕೆಲಸ ಮಾಡಲು ಸೇಲ್ಸ್ ಬಾಯ್ಸ್ (ಹುಡುಗರು) ಬೇಕಾಗಿದ್ದಾರೆ. ವೃಷಭ್ ಮೆಡಿಕಲ್ಸ್ ಜಾಲಿನಗರ ಶಿವಾಲಿ ರಸ್ತೆ, ದಾವಣಗೆರೆ-6.
99805 32781

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಬುಧವಾರ, ಫೆಬ್ರವರಿ 14, 2024

☎ 08192 254736 91642 99999





# ದಾವಣಗೆರೆ ದುಗ್ಗಮ್ಮನ ಜಾತ್ರೆಗೆ ವಿಧ್ಯುಕ್ತ ಚಾಲನೆ

## ಹಂದರಕಂಬಕ್ಕೆ ಪೂಜೆ ಸಲ್ಲಿಸಿದ ಶಾಸಕ ಶಿವಶಂಕರಪ್ಪ, ಸಚಿವ ಮಲ್ಲಿಕಾರ್ಜುನ್

ದಾವಣಗೆರೆ, ಫೆ.13- ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆಗೆ ಮಂಗಳವಾರ ಹಂದರಗಂಬದ ಪೂಜೆ ನೆರವೇರಿಸುವ ಮೂಲಕ ವಿಧ್ಯುಕ್ತವಾಗಿ ಚಾಲನೆ ನೀಡಲಾಯಿತು.

ಶ್ರೀ ದುರ್ಗಾಬಿಕಾ ದೇವಸ್ಥಾನ ಸೇವಾ ಸಮಿತಿ ಅಧ್ಯಕ್ಷರೂ ಆಗಿರುವ ಹಿರಿಯ ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಂದರಗಂಬಕ್ಕೆ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಎಸ್ಸೆಸ್ಸೆಂ, ಪ್ರತಿ ಎರಡು ವರ್ಷಗಳಿಗೊಮ್ಮೆ ನಡೆಯುವ ಜಾತ್ರೆಗೆ ಹಂದರಗಂಬದ ಮೂಲಕ ಚಾಲನೆ ನೀಡಲಾಗಿದೆ ಎಂದರು.

ಬರುವ ಮಾರ್ಚ್ 19, 20 ರಂದು ನಡೆಯುವ ಜಾತ್ರೆಯನ್ನು ಸುಗಮ ಹಾಗೂ ಸರಾಗವಾಗಿ ನಡೆಯಲು ಜಿಲ್ಲಾಡಳಿತ ಹಾಗೂ ಮಹಾನಗರಪಾಲಿಕೆಯಿಂದ ಎಲ್ಲಾ ರೀತಿಯ ಸೌಲಭ್ಯ ಒದಗಿಸಲು ಸೂಚಿಸಲಾಗಿದೆ ಎಂದು ಸಚಿವರು ಹೇಳಿದರು.

ದುರ್ಗಾಂಬಿಕಾ ಜಾತ್ರೆಯು ಹಳೆಯ ಸಂಪ್ರದಾಯದಂತೆ ನೆರವೇರಲಿದೆ. ಪೂಜೆ ಪುನಸ್ಕಾರ ಎಂದಿನಂತಿರಲಿದೆ. ಗೌಡ್ರು, ಶಾನಭೋಗರು, ರೈತರು ಎಲ್ಲರೂ ಆಗಮಿಸುತ್ತಾರೆ. ಎಲ್ಲಾ ಜಾತಿ ಜನಾಂಗದವರು ಉತ್ಸುಕರಾಗಿ ಪಾಲ್ಗೊಳ್ಳುತ್ತಾರೆ. ಪ್ರತಿಯೊಂದು ಸಮಾಜದದವರೂ ಹರಕೆ ಹೊತ್ತಿರುವವರು ಅದನ್ನು ತೀರಿಸುತ್ತಾರೆ. ಮಾತ್ರವಲ್ಲ, ಪ್ರತಿಯೊಬ್ಬರಿಗೂ ಜವಾಬ್ದಾರಿ ವಹಿಸಲಾಗಿರುತ್ತದೆ. ಅದನ್ನು ನೆರವೇರಿಸಲಿದ್ದಾರೆ ಎಂದು ಮಲ್ಲಿಕಾರ್ಜುನ್ ಹೇಳಿದರು.

> **ಬರುವ ಮಾರ್ಚ್ 19, 20ರಂದು ವಿಜೃಂಭಣೆಯಿಂದ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆ ಆಚರಿಸಲು ತೀರ್ಮಾನಿಸಲಾಗಿದೆ. ಜಾತ್ರೆಯಲ್ಲಿ ಎಲ್ಲಾ ಜನಾಂಗದವರೂ ಒಂದಾಗಿ ಪಾಲ್ಗೊಳ್ಳಲಿದ್ದಾರೆ. ನೀರು, ಶೌಚಾಲಯ, ಸ್ವಚ್ಛತೆ ಸೇರಿದಂತೆ ಬರುವ ಜನರಿಗೆ ಮೂಲ ಸೌಲಭ್ಯಕ್ಕೆ ಕ್ರಮಕ್ಕೆ ಸೂಚಿಸಲಾಗಿದೆ. ಕುಸ್ತಿ, ಕುರಿ ಕಾಳಗ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯಲಿವೆ.**
>
> **- ಶಾಮನೂರು ಶಿವಶಂಕರಪ್ಪ, ಶಾಸಕರು**

ನಗರದ ಹಳೇ ಭಾಗದಲ್ಲಿ ಪ್ರತಿ ಮನೆಯಲ್ಲೂ ಹಬ್ಬದ ರಂಗು ಹೆಚ್ಚಾಗಿರುತ್ತದೆ. ಜಾತ್ರೆ ಎಂದರೆ ಹಿಂಗಿರಬೇಕು ಎಂದು ಅಲ್ಲಿನ ಜನ ತೋರಿಸಿಕೊಡುತ್ತಾರೆ. ಅಷ್ಟು ಸಂಭ್ರಮ ಅಲ್ಲಿ ಮನೆ ಮಾಡಿರುತ್ತದೆ. ಪ್ರತಿಯೊಂದು ಗ್ರಾಮದಿಂದಲೂ ಬೀಗರು, ನೆಂಟರಿಷ್ಟರು ಬಂದಿರುತ್ತಾರೆ. ಏಪ್ರಿಲ್ 2 ರವರೆಗೆ ಹಬ್ಬದ ವಾತಾವರಣ ಇರುತ್ತದೆ. ಈ ವರ್ಷವೂ ಸಹ ಎಲ್ಲರ ಸಹಕಾರದಿಂದ ಜಾತ್ರಾ ಮಹೋತ್ಸವವನ್ನು ಅದ್ದೂರಿಯಾಗಿ ಹಾಗೂ ಅಚ್ಚುಕಟ್ಟಾಗಿ ನೆರವೇರಿಸೋಣ ಎಂದು ಹೇಳಿದರು.

ಡಾ. ಪ್ರಭಾ ಮಲ್ಲಿಕಾರ್ಜುನ್, ಸಮರ್ಥ್ ಶಾಮನೂರು, ಧರ್ಮದರ್ಶಿ ಗೌಡ್ರ ಚನ್ನಬಸಪ್ಪ, ಹನುಮಂತರಾವ್ ಸಾವಂತ್, ಪಾಲಿಕೆ ಮೇಯರ್ ಬಿ.ಹೆಚ್. ವಿನಾಯಕ, ಹೆಚ್.ಬಿ. ಗೋಣೆಪ್ಪ, ಹನುಮಂತರಾವ್ ಜಾಧವ್, ಮಾಲತೇಶ್ ಜಾಧವ್, ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ಬಿ.ಹೆಚ್. ವೀರಭದ್ರಪ್ಪ, ಉಮೇಶ್ ರಾವ್ ಸಾಳಂಕಿ, ಬಾಬುರಾವ್ ಸಾಳಂಕಿ, ಮುದೇಗೌಡ್ರ ವಿಶ್ವನಾಥ್, ಬಿ.ಕೆ. ರಾಮಕೃಷ್ಣ, ಕರಿಗಾರ ಬಸಪ್ಪ ಇತರರು ಈ ಸಂದರ್ಭದಲ್ಲಿದ್ದರು.

# ಹದಗೆಟ್ಟ ಕಾನೂನು ಸುವ್ಯವಸ್ಥೆ

## ವಿಧಾನಸಭೆಯಲ್ಲಿ ವಾಗ್ದಾಳಿ ನಡೆಸಿದ ಪ್ರತಿಪಕ್ಷ

ಬೆಂಗಳೂರು, ಫೆ. 13- ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಹಗಲಿನಲ್ಲೇ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ, ಕೊಲೆ, ಸುಲಿಗೆ ನಡೆಯುತ್ತಿವೆ ಎಂದು ವಿಧಾನಸಭೆಯಲ್ಲಿಂದು ಪ್ರತಿಪಕ್ಷಗಳು ಮಾಡಿದ ಆರೋಪ ಭಾರೀ ಕೋಲಾಹಲಕ್ಕೆ ಎಡೆ ಮಾಡಿಕೊಟ್ಟಿತು.

ಸದನ ಆರಂಭಗೊಳ್ಳುತ್ತಿದ್ದಂತೆ ಪ್ರತಿಪಕ್ಷದ ನಾಯಕ ಆರ್.ಅಶೋಕ್, ಸುನೀಲ್ ಕುಮಾರ್ ಸೇರಿದಂತೆ ಹಲವರು ಮಾಡಿದ ಆರೋಪ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರ ನಡುವೆ ಮಾತಿನ ಚಕಮಕಿಗೆ ಕಾರಣವಾಯಿತು.

ಸಭಾಧ್ಯಕ್ಷ ಯು.ಟಿ.ಖಾದರ್ ಪ್ರಶ್ನೋತ್ತರ ವೇಳೆಯನ್ನು ಕೈಗೆತ್ತಿಕೊಳ್ಳಲು ಮುಂದಾದಾಗ ಮಧ್ಯ ಪ್ರವೇಶಿಸಿದ ಅಶೋಕ್, ಹಾವೇರಿಯಲ್ಲಿ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರವಾಗಿದೆ, ಬೆಳಗಾವಿಯಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ ದೌರ್ಜನ್ಯ ನಡೆಸಲಾಗಿದೆ, ಶಿವಮೊಗ್ಗದಲ್ಲಿ ಮಚ್ಚು-ಲಾಂಗ್‌ಗಳ ಬ್ಯಾನರ್ ಹಾಕುತ್ತಿದ್ದಾರೆ, ಭಗವಧ್ವಜ ಅಳವಡಿಸಲು ವಿರೋಧ ವ್ಯಕ್ತಪಡಿಸಲಾಗುತ್ತಿದೆ.

ಸೈಬರ್ ಕ್ರೈಮ್‌ಗಳು ಹೆಚ್ಚಾಗಿವೆ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ, ಪ್ರಶ್ನೋತ್ತರ ವೇಳೆಯನ್ನು ಬದಿಗಿರಿಸಿ ನಿಲುವಳಿ ಸೂಚನೆಯಡಿ ಚರ್ಚೆಗೆ ಅವಕಾಶ ನೀಡಬೇಕು ಎಂದು ಮನವಿ ಮಾಡಿದರು.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮಾತನಾಡಿ, ವಿರೋಧ ಪಕ್ಷಗಳ ಬೇಡಿಕೆಯಂತೆ ಚರ್ಚೆ ಮಾಡಲು ಅಭ್ಯಂತರ ಇಲ್ಲ, ನಿಯಮಾವಳಿ ಪ್ರಕಾರ ಮೊದಲು ಪ್ರಶ್ನೋತ್ತರ ನಡೆಯಲಿ ಎಂದರು.

ಸುನೀಲ್ ಕುಮಾರ್, ಆರಗ ಜ್ಞಾನೇಂದ್ರ ಮಾತನಾಡಿ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಚರ್ಚೆಗೆ ಮೊದಲು ಅವಕಾಶ ನೀಡಿ ಎಂದು ಪಟ್ಟು ಹಿಡಿದರು.

ಸಚಿವ ಪ್ರಿಯಾಂಕ ಖರ್ಗೆ ಮಾತನಾಡಿ, ಕಾನೂನು ಸುವ್ಯವಸ್ಥೆ ಹದಗೆಡಿಸುವವರು ನೀವೇ, ಇಲ್ಲಿ ಚರ್ಚೆ ಮಾಡುವವರು ನೀವೇ, ರಾಜ್ಯದ ರೈತರನ್ನು ಮಧ್ಯ ಪ್ರದೇಶದಲ್ಲಿ ಬಂಧಿಸಲಾಗಿದೆ, ಅದರ ಬಗ್ಗೆಯೂ ಚರ್ಚೆ ಮಾಡೋಣ, ಪಿಎಸ್‌ಐ ನೇಮಕಾತಿ ಹಗರಣದ ಕುರಿತು ನ್ಯಾಯಮೂರ್ತಿ ವೀರಪ್ಪ ನೇತೃತ್ವದ ನ್ಯಾಯಾಂಗ ತನಿಖಾ ಆಯೋಗದ ಕುರಿತು ಚರ್ಚೆಯಾಗಲಿ, ರಾಷ್ಟ್ರಧ್ವಜವನ್ನು ಕೆಳಗೆ ಇಳಿಸಿ ಭಗವಧ್ವಜ ಏರಿಸುವುದು ಚರ್ಚೆಯಾಗಲೀ, ಪ್ರಸ್ತಾಪ ಮಾಡಿ ಎಂದು ಸವಾಲು ಹಾಕಿದರು.

ಸುನೀಲ್ ಕುಮಾರ್, ನಾವು ಏನು ಪ್ರಸ್ತಾಪ ಮಾಡಬೇಕು ಎಂಬ ಬಗ್ಗೆ ನೀವು ನಿರ್ದೇಶನ ನೀಡುವ ಅಗತ್ಯ ಇಲ್ಲ ಎಂದರು.

ಈ ವೇಳೆ ಪ್ರಿಯಾಂಕ್ ಖರ್ಗೆ ಮತ್ತು ಸುನೀಲ್ ಕುಮಾರ್ ನಡುವೆ ಮಾತಿನ ಚಕಮಕಿ ನಡೆಯಿತು.

ಅಶೋಕ್, ನಮಗೆ ಬುದ್ಧಿ ಹೇಳಲು ಬರಬೇಡಿ, ನಿಮ್ಮ ಇಂಡಿಯಾ ಮಿತ್ರಕೂಟಕ್ಕೆ ಹೇಳಿಕೊಳ್ಳಿ ಎಂದು ತಿರುಗೇಟು ನೀಡಿದರು.

ಕೆಲಕಾಲ ಕಾವೇರಿದ ಚರ್ಚೆ ಬಳಿಕ ಸಭಾಧ್ಯಕ್ಷ ಯು.ಟಿ.ಖಾದರ್, ಸದಸ್ಯರು ಆರಂಭದ ಹುಮ್ಮಸ್ಸಿನಲ್ಲಿರುತ್ತಾರೆ, ನಿಧಾನಕ್ಕೆ ಸಮ ಪ್ರಮಾಣಕ್ಕೆ ಬರಲಿ, ಕೊಬ್ಬರಿಗೆ ನ್ಯಾಯಯುತ ಬೆಲೆ ದೊರಕಿಸಿಕೊಡಬೇಕು ಎಂಬ ವಿಚಾರ ಚರ್ಚೆ ಮಾಡಲು ಜೆಡಿಎಸ್‌ನ ಹೆಚ್.ಡಿ.ರೇವಣ್ಣ, ಬಾಲಕೃಷ್ಣ ಮೊದಲು ನಿಲುವಳಿ ಸೂಚನೆ ನೀಡಿದ್ದಾರೆ, ನಂತರ ಬಿಜೆಪಿ ನೀಡಿರುವ ಕಾನೂನು ಸುವ್ಯವಸ್ಥೆ ಸೂಚನೆ ತೆಗೆದುಕೊಳ್ಳೋಣ, ನಿಯಮದ ಪ್ರಕಾರ ಮೊದಲು ಸೂಚನಾ ಪತ್ರ ಕೊಟ್ಟವರಿಗೆ ಅವಕಾಶ ಮಾಡಿಕೊಡಲಾಗುವುದು. ಬಿಜೆಪಿ ಸದಸ್ಯರು ನಾಳೆ ಹೊಸದಾಗಿ ಸೂಚನಾ ಪತ್ರ ಕಳುಹಿಸಲಿ, ಪರಿಶೀಲಿಸುತ್ತೇನೆ ಎಂದರು.

ಅಶೋಕ್ ಹಾಗೂ ಆರಗ ಜ್ಞಾನೇಂದ್ರ ಮಾತನಾಡಿ, ಜೆಡಿಎಸ್ ನಮ್ಮ ಪಾಲುದಾರರಾಗಿದ್ದಾರೆ, ಅಧಿಕೃತ ವಿರೋಧ ಪಕ್ಷದ ನಿಲುವಳಿ ಸೂಚನೆ ಮೊದಲು ಕೈಗೆತ್ತಿಕೊಳ್ಳಬೇಕು, ವಿಚಾರ ಗಂಭೀರವಾಗಿದೆ ಎಂದಾಗ, ನಿಲುವಳಿ ಸೂಚನೆ ನೀಡುವಾಗ ಗಂಭೀರ ವಿಚಾರ ಎಂದು ಗೊತ್ತಿರಲಿಲ್ಲವೇ, ಮೊದಲು (7ನೇ ಪುಟಕ್ಕೆ)

# ಸಿಂಘ್ವಿ, ಮಾಕೆನ್ ರಾಜ್ಯಸಭೆಗೆ ಕಾಂಗ್ರೆಸ್ ಅಭ್ಯರ್ಥಿ ಸಾಧ್ಯತೆ

> **ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇದೇ 27 ರಂದು ನಡೆಯುತ್ತಿರುವ ದ್ವೈವಾರ್ಷಿಕ ಚುನಾವಣೆ**

ಬೆಂಗಳೂರು, ಫೆ. 13- ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯಾವಾದಿ ಅಭಿಷೇಕ್ ಸಿಂಘ್ವಿ, ಎಐಸಿಸಿ ವಕ್ತಾರ ಅಜಯ್ ಮಾಕೆನ್, ಇವರಿಬ್ಬರಲ್ಲಿ ಒಬ್ಬರು ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಗೆ ಕಾಂಗ್ರೆಸ್ ಅಭ್ಯರ್ಥಿಯಾಗುವ ಸಾಧ್ಯತೆಗಳಿವೆ.

ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇದೇ 27 ರಂದು ನಡೆಯುತ್ತಿರುವ ದ್ವೈವಾರ್ಷಿಕ ಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್‌ಗೆ ಸಂಖ್ಯಾಬಲದ ಮೇಲೆ ಮೂರು ಸ್ಥಾನಗಳು ಲಭ್ಯವಾಗಲಿವೆ.

ಮುಂಬರುವ ಲೋಕಸಭಾ ಚುನಾವಣೆ ಯನ್ನು ಗಮನದಲ್ಲಿಟ್ಟುಕೊಂಡು ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಿರುವ ಎಐಸಿಸಿ, ಹೊಸಮುಖ (7ನೇ ಪುಟಕ್ಕೆ)

# ರೋಹನ್ ಬೋಪಣ್ಣಗೆ ಸಿದ್ದರಾಮಯ್ಯ ಅಭಿನಂದನೆ: 50 ಲಕ್ಷ ಬಹುಮಾನ ಘೋಷಣೆ

ಬೆಂಗಳೂರು, ಫೆ. 13- ಆಸ್ಟ್ರೇಲಿಯಾ ಮುಕ್ತ ಟೆನಿಸ್ ಪಂದ್ಯಾವಳಿಯ ಪುರುಷರ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದು ಐತಿಹಾಸಿಕ ಸಾಧನೆ ಮಾಡಿದ ಕರ್ನಾಟಕದ ರೋಹನ್ ಬೋಪಣ್ಣ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಅಭಿನಂದಿಸಿ, 50 ಲಕ್ಷ ರೂ.ಗಳ ಬಹುಮಾನ ಘೋಷಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಗೋವಿಂದ ರಾಜು ಹಾಗೂ ರೋಹನ್ ಬೋಪಣ್ಣ ಕುಟುಂಬದವರು ಉಪಸ್ಥಿತರಿದ್ದರು.

# ಜನರನ್ನು ಕಚೇರಿಗಳಿಗೆ ಅಲೆದಾಡಿಸಬೇಡಿ: ಸಚಿವ ಎಸ್ಸೆಸ್ಸೆಂ ಸೂಚನೆ

## 'ಮನೆ ಬಾಗಿಲಿಗೆ ಇ-ಆಸ್ತಿ ದಾಖಲೆ' ಆಂದೋಲನಕ್ಕೆ ಚಾಲನೆ ನೀಡಿದ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್

ದಾವಣಗೆರೆ, ಫೆ. 13- ಮಹಾನಗರ ಪಾಲಿಕೆ ವತಿಯಿಂದ ಮಾರ್ಚ್ ಅಂತ್ಯದ ವೇಳೆಗೆ ಎಲ್ಲಾ ವಾರ್ಡ್‌ಗಳಲ್ಲಿ ಇ-ಆಸ್ತಿ ದಾಖಲೆಗಳನ್ನು ಮನೆ ಬಾಗಿಲಿಗೆ ತಲುಪಿಸುವ ಸೇವಾ ಕಾರ್ಯವನ್ನು ಹಮ್ಮಿಕೊಂಡಿದ್ದು, ನಾಗರಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಕರೆ ನೀಡಿದರು.

ನಿಟುವಳ್ಳಿಯ ದುರ್ಗಾಂಬಿಕಾ ದೇವಸ್ಥಾನದ ಆವರಣದಲ್ಲಿ ಜಿಲ್ಲಾಡಳಿತ, ಮಹಾನಗರ ಪಾಲಿಕೆ ಸಹಯೋಗದಲ್ಲಿ ಇಂದು ಹಮ್ಮಿಕೊಂಡಿದ್ದ ಆಸ್ತಿ ತೆರಿಗೆ ಪಾವತಿಸುವ ನಾಗರೀಕರಿಗೆ 'ಮನೆ ಬಾಗಿಲಿಗೆ ಇ-ಆಸ್ತಿ' ದಾಖಲೆ ವಿತರಿಸುವ ಆಂದೋಲನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

2012 ರಲ್ಲಿ ನಗರದಲ್ಲಿ 45 ಸಾವಿರ ಜನರಿಗೆ ಆಶ್ರಯ ಯೋಜನೆಯಡಿ ಆಶ್ರಯ ನಿವಾಸಿಗಳಿಗೆ ಹಕ್ಕುಪತ್ರ ನೀಡ ಲಾಗಿತ್ತು. ಆ ಸಂದರ್ಭದಲ್ಲಿ ಮನೆ ಸಂಖ್ಯೆ ಇರಲಿಲ್ಲ. ಅವರೆಲ್ಲರೂ ಖಾತೆ ಮಾಡಿಸಿ ಕೊಂಡಿದ್ದು, ಎಲ್ಲಾ ಹಕ್ಕುಗಳನ್ನು ಹೊಂದಲು ಇ-ಆಸ್ತಿ ದಾಖಲೆ ಬಹಳ ಪ್ರಮುಖವಾಗಿರುತ್ತದೆ. ಇನ್ನೂ ಕೆಲವು ನಿವಾಸಿಗಳಿಗೆ ಹಕ್ಕುಪತ್ರ ವಿತರಿಸುವುದು ಬಾಕಿ ಇದೆ ಎಂದರು.



ಜನರು ಆಸ್ತಿ ತೆರಿಗೆ ಪಾವತಿಸಿ, ಇ-ಆಸ್ತಿ ದಾಖಲೆ ಪಡೆಯಲು ಬಂದಾಗ ಅವರಿಂದ ಬಡಾವಣೆ ನಕ್ಷೆ, ಮನೆ ನಕ್ಷೆ, ಮನೆ ನಿರ್ಮಾಣ ಪರವಾನಗಿ ದಾಖಲೆಗಳನ್ನು ಕೇಳದೇ ಪ್ರಾಯೋಗಿಕ ದಾಖಲೆಗಳನ್ನು ಪರಿಗಣನೆಗೆ ತೆಗೆದುಕೊಂಡು, ಅಲೆದಾಡಿಸದೇ ಆಸ್ತಿ ಖಾತೆ ಮಾಡಿ ಕೊಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜನರು ಆಸ್ತಿ ತೆರಿಗೆ ಪಾವತಿಸಿ ಇ-ಆಸ್ತಿ ದಾಖಲೆ ಪಡೆಯುವುದರಿಂದ ಪರೋಕ್ಷವಾಗಿ ಮಹಾನಗರ ಪಾಲಿಕೆಗೆ ಆದಾಯ ಬರಲಿದೆ. ನೀರಿನ ಶುಲ್ಕ ಸಹ ವಸೂಲಿಯಾಗಲಿದೆ. ವಲಯವಾರು ಪ್ರಗತಿ ವರದಿಯನ್ನು ಪ್ರತಿ ವಾರ ನೀಡಲು ತಿಳಿಸಿದರು.

**ಅಭಿವೃದ್ಧಿ ಕೆಲಸಕ್ಕೆ ಪಾಲಿಕೆ ಹಣ ಬಳಸಿ:** 250 ಲಕ್ಷ ರೂ.ಗಳಲ್ಲಿ 29, 32, 35, 36 ನೇ ವಾರ್ಡ್‌ಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ ಎಂದು ಹೇಳಿದರು. ಸರ್ಕಾರದ ಅನುದಾನದಿಂದ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಪ್ರಮುಖ ರಸ್ತೆಗಳನ್ನು ಈಗಾಗಲೇ ನಿರ್ಮಾಣ ಮಾಡಲಾಗಿದೆ. ಪಾಲಿಕೆಯ ಅನುದಾನದಲ್ಲಿ ವಾರ್ಡ್ ರಸ್ತೆ, ಗುಂಡಿ ಮುಚ್ಚುವ ಕಾಮಗಾರಿ, ಬ್ರಿಡ್ಜ್, ಚರಂಡಿ ಕಾಮಗಾರಿ ಕೈಗೆತ್ತಿಕೊಳ್ಳಲು ತಿಳಿಸಿ, ಪಾಲಿಕೆಗೆ ಮುಂದಿನ ಆರ್ಥಿಕ ವರ್ಷದಲ್ಲಿ ಹೆಚ್ಚಿನ ಅನುದಾನ ಸರ್ಕಾರದಿಂದ ಬರಲಿದೆ. ಈಗಾಗಲೇ ಜಲಸಿರಿ ಕಾಮಗಾರಿ, ಅಂಡರ್‌ಗ್ರೌಂಡ್ ವಿದ್ಯುತ್ ಕೇಬಲೀಕರಣ, 25 ಕೋಟಿ ರೂ.ಗಳಲ್ಲಿ ವಿಸ್ತರಣೆಯಾದ ಬಡಾವಣೆಗಳಿಗೆ ಒಳಚರಂಡಿ ನಿರ್ಮಾಣದ ಕಾಮಗಾರಿಗಳು ನಡೆಯುತ್ತಿವೆ ಎಂದು ಮಾಹಿತಿ ನೀಡಿದರು.

**ದಾವಣಗೆರೆ ಜಿಲ್ಲೆ ಪ್ರಥಮ:** ಕಂದಾಯ ಇಲಾಖೆಯಡಿ ಜಿಲ್ಲೆ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿದ್ದು, ಅದೇ ರೀತಿ ಪಾಲಿಕೆಯಿಂದ ಎಲ್ಲಾ ನಾಗರಿಕರ ಸೇವೆಗಳನ್ನು ಆನ್‌ಲೈನ್ ಮಾಡುವ ನಿಟ್ಟಿನಲ್ಲಿ ಕಚೇರಿ ಗಣಕೀಕರಣಗೊಳಿಸಿ ಶೀಘ್ರವೇ ಜನರಿಗೆ ಗುಣಮಟ್ಟದ ಸೇವೆ ಒದಗಿಸಲು ಸೂಚಿಸಿದರು.

ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಮಾತನಾಡಿ, ಜನಸ್ನೇಹಿ ಆಡಳಿತ ನೀಡಲು ಸರ್ಕಾರ ಬದ್ಧವಾಗಿದ್ದು, ಮನೆ ಬಾಗಿಲಿಗೆ ಸೇವೆ ಒದಗಿಸಲಾಗುತ್ತಿದೆ. ನನ್ನ ಆಸ್ತಿ, ನನ್ನ ದಾಖಲೆ, ನನ್ನ ಹಕ್ಕು ಘೋಷವಾಕ್ಯದಡಿ ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಇ-ಆಸ್ತಿ ದಾಖಲೆ ನೀಡಲು ಇಂದಿನಿಂದಲೇ ಚಾಲನೆ ನೀಡಲಾಗಿದೆ ಎಂದರು.

ಇ-ಆಸ್ತಿ ದಾಖಲೆ ಪಡೆಯುವುದರಿಂದ ಅನೇಕ ಸಮಸ್ಯೆಗಳಿಗೆ ಪರಿಹಾರ ಹಾಗೂ ಆಸ್ತಿ ಮಾಲೀಕರಿಗೆ ಶೇ. 100 ರಷ್ಟು ಮಾಲಿಕತ್ವ ಸಿಗಲಿದೆ. ಇದರಿಂದ ಆಸ್ತಿ ಮಾರಾಟ, ಖರೀದಿ ಮತ್ತು ಮನೆ ನಿರ್ಮಾಣಕ್ಕೆ ಬ್ಯಾಂಕ್ ಸಾಲ ಪಡೆಯಲು ಅನುಕೂಲವಾಗುತ್ತದೆ. ನಿವೇಶನ ಹಕ್ಕುಪತ್ರ ಪಡೆದವರೂ ಸಹ ಇ-ಆಸ್ತಿ ಪಡೆದುಕೊಳ್ಳಬೇಕು. ಈ ಕಾಯಿದೆಯು 2021 ರಿಂದ ಜಾರಿಗೆ ಬಂದಿದೆ. ಪಾಲಿಕೆ ವ್ಯಾಪ್ತಿಯಲ್ಲಿ 1.75 ಲಕ್ಷ ಆಸ್ತಿಗಳಲ್ಲಿ ಇಲ್ಲಿಯವರೆಗೆ ಕೇವಲ 30 ಸಾವಿರ ಆಸ್ತಿಗೆ ಇ-ಆಸ್ತಿ ದಾಖಲೆಗಳನ್ನು ಪಡೆಯಲಾಗಿದೆ. ಇನ್ನೂ 1.45 ಲಕ್ಷ ಇ-ಸ್ವತ್ತುಗಳನ್ನು ವಿತರಣೆ ಮಾಡಬೇಕಾಗಿದೆ ಎಂದು ಹೇಳಿದರು.

ಮಹಾನಗರ ಪಾಲಿಕೆ (7ನೇ ಪುಟಕ್ಕೆ)

# ಎನ್‌ಡಿಎ ಸರ್ಕಾರ ಬಂದ ನಂತರ ನಿರುದ್ಯೋಗ ಸಮಸ್ಯೆ ಉಲ್ಬಣ



ಬೆಂಗಳೂರು, ಫೆ. 13- ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಿರುದ್ಯೋಗ ಸಮಸ್ಯೆ ಉಲ್ಬಣಗೊಂಡು ಯುವಜನರು ಕೆಲಸ ಇಲ್ಲದಂತಾಗಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಕಿಡಿಕಾರಿದ್ದಾರೆ.

ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ ವರದಿ ಹೊರಬೀಳುತ್ತಿದ್ದಂತೆ ಇದನ್ನು ಆಧಾರವಾಗಿಟ್ಟುಕೊಂಡು ಮುಖ್ಯಮಂತ್ರಿ ಅವರು ಸರಣಿ ಟ್ವೀಟ್ ಮಾಡಿ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಮೋದಿ ಅವರು ಅಧಿಕಾರಕ್ಕೆ ಬರುವ ಮುನ್ನ ಶೇಕಡ 5.44ರಷ್ಟಿದ್ದ ನಿರುದ್ಯೋಗ (7ನೇ ಪುಟಕ್ಕೆ)

# ಕಡೇನಂದಿಹಳ್ಳಿ : 36 ಅಡಿ ಎತ್ತರದ ಜಗದ್ಗುರು ರೇಣುಕಾಚಾರ್ಯರ ಪುತ್ಥಳಿ ಲೋಕಾರ್ಪಣೆ

ಶಿಕಾರಿಪುರ, ಫೆ. 13 - ಜ್ಞಾನ ಕ್ರಿಯಾತ್ಮಕವಾದ ಧರ್ಮ ಪಾಲನೆಯಿಂದ ಜಗದಲ್ಲಿ ಶಾಂತಿ ನೆಲೆಸಲು ಸಾಧ್ಯ. ಅಂತರಂಗ ಮತ್ತು ಬಹಿರಂಗ ಪರಿಶುದ್ಧಗೊಳಿಸುವ ಶಕ್ತಿ ಶ್ರೀ ಗುರುವಿಗೆ ಇದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ವಿಚಾರ ಧಾರೆ ಸರ್ವರಿಗೂ ದಾರಿದೀಪ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ತಾಲ್ಲೂಕಿನ ಕಡೇನಂದಿಹಳ್ಳಿ ಗ್ರಾಮದ ಶ್ರೀ ಗುರು ರೇವಣಸಿದ್ಧೇಶ್ವರ ಪುಣ್ಯಾಶ್ರಮದಲ್ಲಿ ಇಂದು ಜರುಗಿದ 36 ಅಡಿ ಎತ್ತರದ ಶ್ರೀ ಜಗದ್ಗುರು ರೇಣುಕಾಚಾರ್ಯರ ಪುತ್ಥಳಿ ಅನಾವರಣ ಮಹಾಮಸ್ತಕಾಭಿಷೇಕ ಪುಷ್ಪಾರ್ಚನೆ ನೆರವೇರಿಸಿದ ನಂತರ ಜರುಗಿದ ಧರ್ಮ ಸಂಸ್ಕೃತಿ ಪುನಶ್ಚೇತನ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಸಂಸ್ಕಾರ, ಸಂಸ್ಕೃತಿಗಳ ಮೂಲಕ ಅಂಗ ಅವಗುಣಗಳನ್ನು ದೂರ ಮಾಡಿ ಲಿಂಗಗುಣ ಬೆಳೆಸಲು ಶ್ರಮಿಸಿದವರು ರೇಣುಕಾಚಾರ್ಯರು. ಜೀವಾತ್ಮ ಪರಮಾತ್ಮನಾಗುವ ಅಂಗ ಲಿಂಗವಾಗುವ ಭವಿ ಭಕ್ತನಾಗುವ ಸಾಧನಾ ಮಾರ್ಗವನ್ನು ಬೋಧಿಸಿ ಜೀವನ ಉತ್ಕರ್ಷತೆಗೆ ಕಾರಣರಾದವರು



ರೇಣುಕಾಚಾರ್ಯರು. ಗಂಡು-ಹೆಣ್ಣು, ಉಚ್ಚ-ನೀಚ ಮತ್ತು ಬಡವ-ಬಲ್ಲಿದ ಎನ್ನದೇ ಎಲ್ಲರ ಶ್ರೇಯಸ್ಸಿಗಾಗಿ ಅವರು ಶ್ರಮಿಸಿದ್ದನ್ನು ಮರೆಯಲಾಗದು. ಭೌತಿಕ ಬದುಕಿಗೆ ಸಂಪತ್ತಷ್ಟೇ ಮುಖ್ಯವಲ್ಲ. ಅದರೊಂದಿಗೆ ಶಿವಜ್ಞಾನದ ಅರಿವು ಮೂಡಿಸುವುದು ಮುಖ್ಯವೆಂದು ಆರೋಗ್ಯ ಪೂರ್ಣ ಸಮಾಜಕ್ಕೆ ಶ್ರಮಿಸಿದ ಕೀರ್ತಿ ಶ್ರೀ ಜಗದ್ಗುರು ರೇಣುಕಾಚಾರ್ಯರಿಗೆ ಸಲ್ಲುತ್ತದೆ. ಇಂತಹ ಭವ್ಯ ಸುಂದರ ಶ್ರೀ ಜಗದ್ಗುರು ರೇಣುಕಾಚಾರ್ಯರ ಪುತ್ಥಳಿ ನಿರ್ಮಿಸಿ ಲೋಕಾರ್ಪಣೆಗೈದ ಶ್ರೀ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾಡಿದ ಸತ್ಕಾರ್ಯ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆಂದು ವರ್ಷ ವ್ಯಕ್ತಪಡಿಸಿ, ಶ್ರೀಗಳವರಿಗೆ 'ಶಿವ ಪೂಜಾ ತಪೋರತ್ನ' ಪ್ರಶಸ್ತಿ, ಚಿನ್ನದುಂಗುರ ಮತ್ತು ರೇಷ್ಮೆ ಮಡಿ ಹೊದಿಸಿ ಫಲ-ಪುಷ್ಪವಿತ್ತು ಜಗದ್ಗುರುಗಳು ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಸಂಸದ ಬಿ.ವೈ. ರಾಘವೇಂದ್ರ ಅವರಿಗೆ 'ಶ್ರೀ ರಂಭಾಪುರಿ ಜಗದ್ಗುರು ರೇವಣಸಿದ್ಧೇಶ್ವರ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಮಾಡಿ ಶುಭ ಹಾರೈಸಿದರು. ಪ್ರಶಸ್ತಿ ಸ್ವೀಕರಿಸಿದ ಬಿ.ವೈ.ರಾಘವೇಂದ್ರ ಕೃತಜ್ಞತಾ ಪೂರ್ವಕ ಮಾತುಗಳನ್ನಾಡಿದರು.

ಕಾರ್ಕಳದ ಶಿಲ್ಪಿ ಕೃಷ್ಣಾ (7ನೇ ಪುಟಕ್ಕೆ)

# ಹರಿಹರದಲ್ಲಿ ಶೀಘ್ರ ಜನಸ್ಪಂದನ ಸಭೆ

## ಗುತ್ತೂರಿನಲ್ಲಿ ಇ-ಸೊತ್ತು ಆಂದೋಲನಕ್ಕೆ ಚಾಲನೆ ನೀಡಿದ ಜಿಲ್ಲಾಧಿಕಾರಿ



> **ಕುಡಿಯುವ ನೀರಿನ ಸಮಸ್ಯೆ ಬರದಂತೆ ಎಚ್ಚರ ವಹಿಸಲು ಅಧಿಕಾರಿಗಳಿಗೆ ನಿರ್ದೇಶನ**

ಹರಿಹರ, ಫೆ,13- ಸಾರ್ವಜನಿಕರ ಅಹವಾಲು ಸ್ವೀಕರಿಸಲು ನಗರದಲ್ಲಿ ಶೀಘ್ರದಲ್ಲೇ ಜನಸ್ಪಂದನ ಸಭೆಯನ್ನು ಆಯೋಜಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ ಎಂ.ವಿ. ವೆಂಕಟೇಶ್ ತಿಳಿಸಿದ್ದಾರೆ.

ನಗರದ ಹೊರವಲಯದ ಗುತ್ತೂರು ಗ್ರಾಮದಲ್ಲಿ ಇ- ಸ್ವತ್ತು ಆಂದೋಲನಕ್ಕೆ ಚಾಲನೆ ನೀಡಿ, ತದನಂತರ ನಗರದ ನೀರು ಶುದ್ಧೀಕರಣ ಘಟಕಕ್ಕೆ ಮತ್ತು ನಗರಸಭೆ ಮುಂಭಾಗದಲ್ಲಿ ನೂತನ ನಗರಸಭೆ ಕಟ್ಟಡದ ಕಾಮಗಾರಿ ವೀಕ್ಷಣೆ ಮಾಡಿ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ನಗರ ಪ್ರದೇಶಗಳಲ್ಲಿ ಮತ್ತು ಪಟ್ಟಣ ಪಂಚಾಯತಿ, ಮಹಾನಗರಪಾಲಿಕೆ ಗಳಲ್ಲಿ ಇ-ಸ್ವತ್ತು ದಾಖಲೆಗಳನ್ನು ಪಡೆಯುವುದಕ್ಕೆ ಬಹಳ ಕಷ್ಟವಾಗುತ್ತಿತ್ತು. ಹಾಗಾಗಿ ಜನರ ಮನೆಬಾಗಿಲಿಗೆ ಈ-ಸ್ವತ್ತು ತಲುಪಿಸಬೇಕು ಮತ್ತು ಆಡಳಿತವನ್ನು ಜನಪರವಾಗಿ ಹಾಗೂ ಜನಸ್ನೇಹಿಯಾಗಿ ಮಾಡಬೇಕು ಎಂಬ ದೃಷ್ಟಿಯಿಂದ ನಗರದ ಎಲ್ಲಾ ವಾರ್ಡ್ ಗಳಲ್ಲಿ ಈ ಸ್ವತ್ತು ಆಂದೋಲನದ ಮೂಲಕ ಎರಡು ಗಂಟೆಯ ಸಮಯದಲ್ಲಿ ವಿತರಣೆ ಮಾಡಲಾಗುತ್ತದೆ. ಅನೇಕ ವರ್ಷಗಳಿಂದ ಫಾರಂ 3 ಕೊಡಬೇಕಾದರೆ ಎರಡು ಮತ್ತು ಮೂರು ವರ್ಷ ಆಗಿದ್ದವರು ಯಾರು ಯಾರಿಗೆ ಹಕ್ಕು ಪತ್ರ ಮಾತ್ರ ಸಿಕ್ಕಿದ್ದವೋ ಅವರಿಗೆ ಇ- ಸ್ವತ್ತು ಮಾಡಿಸಿಕೊಳ್ಳಲು ಆಗಿರಲಿಲ್ಲ, ಅಂತವರು ಈಗ 2 ಗಂಟೆ ಸಮಯದಲ್ಲಿ ಇ-ಸ್ವತ್ತು ಖಾತೆ ದಾಖಲೆಗಳನ್ನು ಪಡೆಯಬಹುದಾಗಿದೆ. ಇಂದು (7ನೇ ಪುಟಕ್ಕೆ)

# JEE (Mains) 2024 ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಸರ್ ಎಂ ವಿ ಕಾಲೇಜಿನ ವಿದ್ಯಾರ್ಥಿಗಳ ಅದ್ಭುತ ಸಾಧನೆ

Continued From Page No. 1



All The Best For Your Future Endeavors

**From College Management, Principal, Teaching & Non-Teaching Staff**

## SIR M V GROUP OF INSTITUTIONS

DAVANGERE 08192-261200 9243312223 8722141400 | SHIMOGA 9035141142 9606554836 9606558762 | BALLARI 8197764018 9945377965

# ಅಕ್ರಮ ಕಸಾಯಿ ಖಾನೆಗಳ ತೆರವಿಗೆ ಆಗ್ರಹ




ದಾವಣಗೆರೆ, ಫೆ. 13- ನಗರ ದಲ್ಲಿನ ಅಕ್ರಮ ಕಸಾಯಿಖಾನೆಗಳ ತೆರವಿಗೆ ಆಗ್ರಹಿಸಿ ಹಿಂದೂ ಜಾಗರಣ ವೇದಿಕೆ ಜಿಲ್ಲಾ ಘಟಕದ ಕಾರ್ಯಕರ್ತರು ಪ್ರತಿಭಟನೆ ನೆಡಸಿದರು.

ಕಾಯಿಪೇಟೆಯ ಬಸವೇಶ್ವರ ದೇವಸ್ಥಾನ ಆವರಣದಿಂದ ಮೆರ ವಣಿಗೆ ನಡೆಸಿದ ಕಾರ್ಯಕರ್ತರು, ನಗರಪಾಲಿಕೆ ಬಳಿ ಜಮಾಯಿಸಿ, ಪ್ರತಿಭಟನೆ ನಡೆಸಿದರು.

ಸ್ಥಳಕ್ಕೆ ಜಿಲ್ಲಾಧಿಕಾರಿ ಆಗಮಿಸು ವಂತೆ ಪಟ್ಟು ಹಿಡಿದರು. ಉಪವಿಭಾ ಗಾಧಿಕಾರಿ ಎನ್. ದುರ್ಗಾಶ್ರೀ ಆಗಮಿಸಿ ಮನವಿ ಸ್ವೀಕರಿಸಿದರು.

ನಗರದಲ್ಲಿ ಸುಮಾರು 62 ಅಕ್ರಮ ಕಸಾಯಿಖಾನೆಗಳಿವೆ. ದಿನ ದಲ್ಲಿ ನೂರಾರು ಗೋವುಗಳ ವಧೆ ನಡೆಯುತ್ತಿದ್ದು, ಹಿಂದೂಗಳ ಭಾ ವನೆಗೆ ಧಕ್ಕೆ ತಂದಿದೆ. ಈ ಕಸಾಯಿ ಖಾನೆಗಳ ತೆರವಿಗೆ ಹಲವು ಬಾರಿ ಒತ್ತಾಯಿಸಿ ಜಿಲ್ಲಾಧಿಕಾರಿ, ಎಸ್ಪಿ, ನಗರಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗೋಹತ್ಯಾ ನಿಷೇಧ ಕಾನೂನು ಜಾರಿಯಲ್ಲಿದ್ದರೂ ನಿರಂತರ ಗೋಹತ್ಯೆ ನಡೆಯುತ್ತಿದೆ. ಇದನ್ನು ನೋಡಿಯೂ ಕೆಲ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ತಪ್ಪಿತಸ್ಥರ ವಿರುದ್ಧ ಕ್ರಮವಾಗುತ್ತಿಲ್ಲ. ಈ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳು ನಗರಕ್ಕೆ ಬೇಡ ಎಂದು ಹೇಳಿದರು.

ನಾವು ಶಾಂತ ರೀತಿಯಲ್ಲಿ ಪ್ರತಿಭಟನೆ ಮಾಡುತ್ತಿದ್ದೇವೆ. ಇನ್ನಾದರೂ ಅಧಿಕಾರಿಗಳು ಎಚ್ಚೆತ್ತುಕೊಳ್ಳದಿದ್ದರೆ ಹಿಂದೂ ಜಾಗರಣ ವೇದಿಕೆ ವತಿಯಿಂದಲೇ ಮುಂದಿನ ದಿನಗಳಲ್ಲಿ ಕಸಾಯಿ ಖಾನೆಗಳಿಗೆ ನುಗ್ಗುವುದು ಅನಿವಾರ್ಯವಾಗಲಿದೆ ಎಂದು ಎಚ್ಚರಿಕೆ ನೀಡಿದರು. ಸಂಘಟನೆಯ ಪ್ರಾಂತ ಸಹ ಸಂಚಾಲಕ ಸತೀಶ್ ಪೂಜಾರಿ, ಜಿಲ್ಲಾ ಸಂಚಾಲಕ ವೀರೇಶ್ ಮಟ್ಟಿಕಲ್, ಮುಖಂಡರಾದ ವಿನಾಯಕ ರಾನಡೆ, ರಾಜನಹಳ್ಳಿ ಶಿವಕುಮಾರ್, ಪುನೀತ್ ನಿಟುವಳ್ಳಿ, ವೀರೇಶ್, ಗಿರೀಶ್, ಮನು ಮತ್ತಿತರರು ಉಪಸ್ಥಿತರಿದ್ದರು.

# ಪಾಲಿಕೆ ಹೊರ ಗುತ್ತಿಗೆ ನೌಕರರಿಂದ ಪ್ರತಿಭಟನೆ



**ವೇತನ ನೇರ ಪಾವತಿಗೆ ಒಳಪಡಿಸಲು ಆಗ್ರಹ, ಫೆ.15ರಂದು 'ಹೊರ ಗುತ್ತಿಗೆ ನೌಕರರ ನಡಿಗೆ ಮುಖ್ಯಮಂತ್ರಿಗಳ ಮನೆ ಕಡೆಗೆ' ಆಂದೋಲನ**

ದಾವಣಗೆರೆ, ಫೆ.13- ಸ್ಥಳೀಯ ಸಂಸ್ಥೆಗಳ ಹೊರ ಗುತ್ತಿಗೆ ನೌಕರರನ್ನು ನೇರ ಪಾವತಿಗೆ ಒಳಪಡಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಮಹಾನಗರ ಪಾಲಿಕೆ ಹೊರ ಗುತ್ತಿಗೆ ಘನತ್ಯಾಜ್ಯ ವಿಲೇವಾರಿ ವಾಹನ ಚಾಲಕರ ಸಂಘದ ನೇತೃತ್ವದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಪಾಲಿಕೆ ಮುಂಭಾಗದಲ್ಲಿ ಸಂಘದ ಅಧ್ಯಕ್ಷ ಎಂ.ಆರ್.ದುಗ್ಗೇಶ ನೇತೃತ್ವದಲ್ಲಿ ಎರಡು ದಿನಗಳ ಹೋರಾಟ ಆರಂಭಿಸಿದ ಹೊರ ಗುತ್ತಿಗೆ ನೌಕರರು, ಮಾ.15ರಂದು 'ಹೊರ ಗುತ್ತಿಗೆ ನೌಕರರ ನಡಿಗೆ ಮುಖ್ಯಮಂತ್ರಿಗಳ ಮನೆ ಕಡೆಗೆ' ಆಂದೋಲನದಲ್ಲಿ ಪಾಲ್ಗೊಳ್ಳಲು ಬೆಂಗಳೂರಿಗೆ ತೆರಳಲಿದ್ದಾರೆ.

ಪ್ರತಿಭಟನೆ ವೇಳೆ ಮಾತನಾಡಿದ ಎಂ.ಆರ್. ದುಗ್ಗೇಶ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಹೊರ ಗುತ್ತಿಗೆ ಪೌರ ಚಾಲಕರು, ನೀರುಗಂಟಿಗಳು, ಲೋಡರ್ಸ್, ಕ್ಲೀನರ್ಸ್, ಹೆಲ್ಪರ್ಸ್, ಯುಜಿಡಿ ಕಾರ್ಮಿಕರು ಸೇರಿದಂತೆ ಎಲ್ಲಾ ಹೊರ ಗುತ್ತಿಗೆ ನೌಕರರನ್ನು ನೇರ ಪಾವತಿಗೊಳಪಡಿಸಬೇಕು ಎಂದು ಆಗ್ರಹಿಸಿದರು. ಈವರೆಗೂ ನಗರ ಸ್ಥಳೀಯ ಸಂಸ್ಥೆಗಳ ಹೊರ ಗುತ್ತಿಗೆ ಕಾರ್ಮಿಕರು ನಡೆಸುತ್ತಿರುವ ಹೋರಾಟಕ್ಕೆ ಸರ್ಕಾರದ ಸ್ಪಂದನೆಯೇ ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ನಮ್ಮ ಹೋರಾಟ ನಡೆಯಲಿದೆ. ಹೊರ ಗುತ್ತಿಗೆ ನೌಕರರನ್ನು ನೇರ ಪಾವತಿಯಡಿ ತಂದರೆ ಸರ್ಕಾರಕ್ಕೆ ಜಿಎಸ್ಟಿ ಉಳಿತಾಯದ ಜೊತೆಗೆ ನೌಕರರಿಗೆ ಸೇವಾ ಭದ್ರತೆ ಸಿಗುತ್ತದೆ. ಅಲ್ಲದೇ, ಏಜೆನ್ಸಿಗಳ ಕಿರುಕುಳವೂ ತಪ್ಪಲಿದೆ ಎಂದರು.

ಸಂಘದ ಬಿ.ಸಂತೋಷ್, ಎಚ್.ಎಂ. ಕೊಟ್ರೇಶ್, ಜಿ.ಎಚ್.ಚಂದ್ರಪ್ಪ, ಎಂ.ರಮೇಶ್, ಮೈಲಾರಪ್ಪ, ಎನ್.ದ್ಯಾಮಣ್ಣ, ನವೀನಕುಮಾರ್, ಕೆಟಿಜೆ ನಗರ ರವಿ ಮತ್ತು ಇತರರು ಇದ್ದರು.

ಹೊರ ಗುತ್ತಿಗೆ ನೌಕರರು ಧರಣಿ ನಡೆಸಿದ್ದ ಸ್ಥಳಕ್ಕೆ ಪಾಲಿಕೆ ವಿಪಕ್ಷ ನಾಯಕ ಕೆ.ಪ್ರಸನ್ನ ಕುಮಾರ, ಸದಸ್ಯರಾದ ಎಸ್.ಟಿ.ವೀರೇಶ್, ಆರ್.ಶಿವಾನಂದ್ ಇತರರು ಬೆಂಬಲಿಸಿ, ಹೋರಾಟಕ್ಕೆ ನೈತಿಕ ಸ್ಥೈರ್ಯ ತುಂಬಿದರು.

# ಗಾಂಧಿನಗರದ ದುರ್ಗಾಂಬಿಕಾ ದೇವಸ್ಥಾನದಲ್ಲಿ ಹಂದರಗಂಬ ಪೂಜೆ



ದಾವಣಗೆರೆ, ಫೆ.13- ಗಾಂಧಿ ನಗರದಲ್ಲಿರುವ ಹೊರಟ್ಟಿ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದ ಮುಂಭಾಗದಲ್ಲಿ ಇಂದು ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಹಂದರ ಗಂಬಕ್ಕೆ ಪೂಜೆ ಸಲ್ಲಿಸಿದರು.

ಮಾರ್ಚ್ 19 ಮತ್ತು 20 ರಂದು ನಗರದೇವತೆ ಶ್ರೀ ದುರ್ಗಾಂಬಿಕಾದೇವಿ ಜಾತ್ರೆಯ ಹಿನ್ನೆಲೆಯಲ್ಲಿ ಗಾಂಧಿನಗರದ ಶ್ರೀ ದುರ್ಗಾಂಬಿಕಾ ದೇವಿ , ಚೌಡೇಶ್ವರಿ ದೇವಿ ಮತ್ತು ಹುಲುಗಮ್ಮದೇವಿ ದೇವಸ್ಥಾನಗಳಲ್ಲಿಯೂ ವಿಶೇಷ ಪೂಜಾ ಕಾರ್ಯಗಳು ಮೂಲ ದೇವಸ್ಥಾನದಂತೆಯೇ ಜರುಗುತ್ತವೆ.

ಈ ಸಂದರ್ಭದಲ್ಲಿ ಹೊರಟ್ಟಿ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದ ಅಧ್ಯಕ್ಷ ಎಲ್.ಎಂ.ಹನುಮಂತಪ್ಪ, ಗೌರವ ಅಧ್ಯಕ್ಷ ಎನ್.ನೀಲಗಿರಿಯಪ್ಪ, ಕಾರ್ಯಾಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ, ಕಾರ್ಯದರ್ಶಿ ಬಿ.ಎಂ.ಈಶ್ವರ್, ಖಜಾಂಚಿ ಬಿ.ಎಂ.ರಾಮಸ್ವಾಮಿ, ಎಲ್.ಡಿ.ಗೋಣಪ್ಪ, ಪೂಜಾರ್ ಹನುಮಂತಪ್ಪ, ಡಿ.ಗಂಗಾಧರಪ್ಪ, ಹುಚ್ಚೆಂಗಪ್ಪ, ಪಾಲಿಕೆ ಸದಸ್ಯ ಜಿ.ಡಿ. ಪ್ರಕಾಶ್, ವಾಸುದೇವ, ಚಂದ್ರಪ್ಪ, ಎಲ್.ಎಚ್. ಸಾಗರ್, ಶಿವಮೂರ್ತಿ, ಪರಶುರಾಮ್, ಮಂಜುನಾಥ್, ವೆಂಕಟೇಶ್, ಬೆಳ್ಳೂಡಿ ಹನುಮಂತಪ್ಪ ಹಾಗೂ ಸಮರ್ಥ ಶಾಮನೂರು, ದಿನೇಶ್ ಕೆ.ಶೆಟ್ಟಿ ಮತ್ತಿತರರು ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಜನರನ್ನು ಕಚೇರಿಗಳಿಗೆ ಅಲೆದಾಡಿಸಬೇಡಿ

**(5ನೇ ಪುಟದಿಂದ)** ಆಯುಕ್ತರಾದ ರೇಣುಕಾ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ನಗರ ಪಾಲಿಕೆ 35ನೇ ವಾರ್ಡಿನ ಸದಸ್ಯರಾದ ಶ್ರೀಮತಿ ಸವಿತಾ ಗಣೇಶ್ ಹುಲ್ಲುಮನೆ ಕಾರ್ಯಕ್ರಮದ ಮುಂದಾಳತ್ವ ವಹಿಸಿದ್ದರು.

ತೆರಿಗೆ ಹಣಕಾಸು ಸಮಿತಿ ಅಧ್ಯಕ್ಷ ಉದಯಕುಮಾರ್, ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ ಜಗದೀಶ್, ಪಾಲಿಕೆ ಸದಸ್ಯರಾದ ನಾಗರತ್ನಮ್ಮ, ಜಯಮ್ಮ ಗೋಪಿನಾಥ್, ಚಮನ್‌ಸಾಬ್, ಗಡಿಗುಡಾಳ್ ಮಂಜುನಾಥ್, ನಾಗರಾಜ್, ನಗರ ಯೋಜನಾ ಅಧ್ಯಕ್ಷ ಅಬ್ದುಲ್ ಲತೀಫ್, ಮುಖಂಡರಾದ ಆರ್. ಹೆಚ್. ನಾಗಭೂಷಣ್, ಆರ್.ಎಸ್. ಶೇಖರಪ್ಪ ಮತ್ತಿತರೆ ಗಣ್ಯರು ಭಾಗವಹಿಸಿದ್ದರು.

**ಭೂಮಿ ಪೂಜೆ :** ನಿಟುವಳ್ಳಿ ಇಎಸ್ಐ ಆಸ್ಪತ್ರೆ ಎದುರಿಗೆ ಇರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 41.70 ಲಕ್ಷ ರೂ. ವೆಚ್ಚದ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಚಾಲನೆ ನೀಡಿದರು.

# ಜಗದ್ಗುರು ರೇಣುಕಾಚಾರ್ಯರ ಪುತ್ಥಳಿ ಲೋಕಾರ್ಪಣೆ

**(5ನೇ ಪುಟದಿಂದ)** ಆಚಾರ್ಯ, ಶಿವಮೊಗ್ಗ ಶಿಲ್ಪಿ ಜೀವನ್ ಕಲಾ ಸನ್ನಿಧಿ, ಶಿಕಾರಿಪುರ ಪ್ರಥಮ ದರ್ಜೆ ಗುತ್ತಿಗೆದಾರ ದೇವೇಂದ್ರಪ್ಪ ಇವರಿಗೆ ಪ್ರಶಸ್ತಿ ಮತ್ತು ಗುರುರಕ್ಷೆ ನೀಡಿ, ಶ್ರೀ ರಂಭಾಪುರಿ ಜಗದ್ಗುರುಗಳು ಶುಭ ಹಾರೈಸಿದರು.

ಬಿಜೆಪಿ ಧುರೀಣ ಕೆ.ಎಸ್. ಗುರುಮೂರ್ತಿ ಮತ್ತು ಹೆಚ್.ಬಿ. ಬಳಿಗಾರ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ನೇತೃತ್ವ ವಹಿಸಿದ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು.

ಈ ಸಮಾರಂಭದಲ್ಲಿ ಕನ್ನೂರು-ಸಿಂಧನೂರು ಸೋಮನಾಥ ಶ್ರೀ, ಚನ್ನಗಿರಿ ಕೇದಾರ ಶಿವಶಾಂತವೀರ ಶ್ರೀ, ಹಾರನಹಳ್ಳಿ ಶಿವಯೋಗಿ ಶ್ರೀ, ಕಾರ್ಜುವಳ್ಳಿ ಸದಾಶಿವ ಶ್ರೀ, ಸಂಗೊಳ್ಳಿ ಗುರುಲಿಂಗ ಶ್ರೀಗಳು, ಕಡೆನಂದಿಹಳ್ಳಿ ವೀರಭದ್ರ ಶ್ರೀಗಳು ಸೇರಿದಂತೆ ಹಲವಾರು ಮಠಾಧೀಶರು ಉಪಸ್ಥಿತರಿದ್ದರು.

ಶಿಕ್ಷಕ ನಾಗರಾಜ ಹುಲ್ಲಿನಕೊಪ್ಪ ಸ್ವಾಗತಿಸಿದರು. ಸವಣೂರಿನ ಡಾ|| ಗುರುಪಾದಯ್ಯ ಸಾಲಿಮಠ ನಿರೂಪಿಸಿದರು. ಶಾಂತಾ ಅನಂದ ಇವರಿಂದ ಪ್ರಾರ್ಥನೆ ನಡೆಯಿತು.

# ಕಾಂಗ್ರೆಸ್ ಅಭ್ಯರ್ಥಿ ಸಾಧ್ಯತೆ

**(5ನೇ ಪುಟದಿಂದ)** ಗಳಿಗೆ ಅವಕಾಶ ನೀಡಲು ಮುಂದಾಗಿದೆ ಎನ್ನಲಾಗಿದೆ.

ಅಭ್ಯರ್ಥಿಗಳ ಆಯ್ಕೆ ಸಂಬಂಧ ನಾಳೆ ಬೆಳಗ್ಗೆ ಉನ್ನತ ಮಟ್ಟದ ಸಭೆ ನಡೆಯಲಿದ್ದು, ಒಂದು ಸ್ಥಾನವನ್ನು ಎಐಸಿಸಿ ದೆಹಲಿ ನಾಯಕರಿಗೆ ಮೀಸಲಿಟ್ಟಿದ್ದು ಉಳಿದ ಎರಡನ್ನು ರಾಜ್ಯದವರಿಗೆ ಬಿಟ್ಟುಕೊಟ್ಟಿದೆ.

ರಾಷ್ಟ್ರದ ವಿವಿಧ ರಾಜ್ಯಗಳಿಂದ ರಾಜ್ಯಸಭೆಯ 56 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು ಕಾಂಗ್ರೆಸ್‌ಗೆ ಹೆಚ್ಚಿನ ಸ್ಥಾನಗಳು ಲಭ್ಯವಾಗುತ್ತಿಲ್ಲ.

ಹೀಗಾಗಿ ಕರ್ನಾಟಕದಿಂದ ಒಂದು ಸ್ಥಾನಕ್ಕೆ ಎಐಸಿಸಿಯ ಪ್ರಮುಖರಿಗೆ ಅವಕಾಶ ಮಾಡಿಕೊಡುತ್ತಿದೆ.

ಈ ಎರಡು ಸ್ಥಾನಗಳಿಗೆ ಹಲವರ ಹೆಸರುಗಳು ಕೇಳಿ ಬಂದಿದ್ದು, ಪ್ರಸ್ತುತ ನಿವೃತ್ತಿಯಾಗಲಿರುವ ನಾಸಿರ್ ಹುಸೇನ್, ಜಿ.ಸಿ.ಚಂದ್ರಶೇಖರ್ ಮತ್ತು ಎಲ್. ಹನುಮಂತಯ್ಯ ಅವರು ಪುನಃ ಟಿಕೆಟ್‌ಗಾಗಿ ಲಾಬಿ ನಡೆಸಿದ್ದರೂ ಪಕ್ಷದ ವರಿಷ್ಠರು ಅವರಿಗೆ ಮಣೆ ಹಾಕುವ ಸಾಧ್ಯತೆ ಕಡಿಮೆ.

ನಾಸಿರ್ ಹುಸೇನ್ ಅವರು ಎ.ಐ.ಸಿ.ಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಆಪ್ತರಾಗಿದ್ದು, ಈ ಆಧಾರ ಮೇಲೆ ಮರಳಿ ಟಿಕೆಟ್‌ಗೆ ಲಾಬಿ ಮಾಡುತ್ತಿರುವವರಾದರೂ ದೆಹಲಿ ಮೂಲಗಳ ಪ್ರಕಾರ, ಈ ಯತ್ನಕ್ಕೆ ಮನ್ನಣೆ ದೊರೆಯುವ ಸಾಧ್ಯತೆ ಕಡಿಮೆ ಇದೆ.

ಈ ಮಧ್ಯೆ ಹಿರಿಯ ನಾಯಕ, ಮಾಜಿ ಸಚಿವ ಬಿ.ಎಲ್.ಶಂಕರ್ ಅವರಿಗೆ ರಾಜ್ಯಸಭಾ ಟಿಕೆಟ್ ನೀಡುವಂತೆ ಹಲವು ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದು, ಈ ವಿಷಯದಲ್ಲಿ ತಮಗೆ ಒಲವು ಇದೆಯಾದರೂ ವರಿಷ್ಠರ ತೀರ್ಮಾನ ಅಂತಿಮ ಎಂದು ಹೇಳಿದ್ದಾರೆ.

ರಾಜ್ಯಸಭೆಯ ಮೂರು ಸ್ಥಾನಗಳಿಗೆ ಕಾಂಗ್ರೆಸ್‌ನಲ್ಲಿ ಲಾಬಿ ನಡೆಯುತ್ತಿರುವ ಬೆನ್ನಲ್ಲೇ, ಇಂದು ನಗರಕ್ಕೆ ಆಗಮಿಸಿರುವ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ನಾಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಜೊತೆ ಮಹತ್ವದ ಚರ್ಚೆ ನಡೆಸಲಿದ್ದಾರೆ.

ರಾಜ್ಯಸಭೆಯ ಮೂರು ಸ್ಥಾನಗಳಿಗೆ ಯಾರು ಅಭ್ಯರ್ಥಿಗಳಾಗಬೇಕು ಎಂಬ ಸಂಬಂಧ ಈ ನಾಯಕರು ನಡೆಸಲಿರುವ ಚರ್ಚೆಯ ನಂತರ ಪಕ್ಷದ ವರಿಷ್ಠರಿಗೆ ಶಿಫಾರಸ್ಸು ಪಟ್ಟಿ ರವಾನೆಯಾಗಲಿದೆ.

# ನೀರಾವರಿಗೆ ಮೊದಲ ಆದ್ಯತೆ, ನಂತರ ರಸ್ತೆಗೆ



ಬೆಂಗಳೂರು, ಫೆ. 13- ಕೆರೆ ಮತ್ತು ಕಾಲುವೆಗಳಿಗೆ ನೀರು ಹರಿಸುವುದಕ್ಕೆ ಮೊದಲ ಆದ್ಯತೆ ನಂತರ ರಸ್ತೆ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದು ಜಲ ಸಂಪನ್ಮೂಲ ಇಲಾಖೆ ಹೊಣೆ ಹೊತ್ತಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಧಾನಸಭೆಯಲ್ಲಿಂದು ಸ್ಪಷ್ಟಪಡಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯರುಗಳು, ಬರ, ಸುಡುವ ಬಿಸಿಲು, ಕುಡಿಯುವ ನೀರಿನ ಸಮಸ್ಯೆ, ಅಂತರ್ಜಲ ಕುಸಿಯುತ್ತಿರುವುದು ಮತ್ತು ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಬೇಕೆಂದು ಮಾಡಿದ ಪ್ರಸ್ತಾವಗಳಿಗೆ ಉತ್ತರಿಸಿದ ಉಪಮುಖ್ಯಮಂತ್ರಿಗಳು, ಇದೇ ಕಾರಣಕ್ಕೆ ನಮ್ಮ ಸರ್ಕಾರ ನೀರು ಸಂಗ್ರಹ ಹಾಗೂ ಕುಡಿಯುವ ನೀರಿನ ಯೋಜನೆಗಳಿಗೆ ಮೊದಲ ಆದ್ಯತೆ ನೀಡಲು ತೀರ್ಮಾನಿಸಿದೆ ಎಂದರು.

ಮುಂಗಾರು ಮತ್ತು ಹಿಂಗಾರು ಮಳೆ ಕೊರತೆಯಿಂದ ನಮ್ಮ ಜಲಾಶಯಗಳಿಗೆ ನಿಗದಿತ ಪ್ರಮಾಣದಲ್ಲಿ ನೀರು ಹರಿದು ಬರಲಿಲ್ಲ.

ಪ್ರಸಕ್ತ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದೆಂಬ ದೃಷ್ಟಿಯಿಂದಲೇ ಜಲಾಶಯದಲ್ಲಿನ ನೀರನ್ನು ಕುಡಿಯಲು ಮೀಸಲಿಟ್ಟಿದ್ದೇವೆ. ಇದರಿಂದ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಪ್ರಮುಖ ಪಾಲಿಕೆ ಮತ್ತು ನಗರಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದು. ನಗರ ಪ್ರದೇಶಗಳಲ್ಲೂ ಶೇಕಡ 25ರಷ್ಟು ಕೊಳವೆ ಬಾವಿಗಳನ್ನೇ ಅವಲಂಬಿಸಲಾಗಿದೆ, ಉಳಿದ ಭಾಗಕ್ಕೆ ನಗರ, ಪಟ್ಟಣ ಸಮೀಪದ ನದಿ, ಕೆರೆ ಆಧಾರವಾಗಿವೆ ಎಂದರು.

ಪ್ರತಿಪಕ್ಷದವರು ಮೇಕೆದಾಟು ಯೋಜನೆಯನ್ನು ಅನುಷ್ಠಾನಗೊಳಿಸಲು ನಮ್ಮ ಜೊತೆ ಕೈಜೋಡಿಸಿದರೆ, ಕುಡಿಯುವ ನೀರಿನ ದೊಡ್ಡ ಸಮಸ್ಯೆ ತಪ್ಪಿಸಬಹುದಾಗಿದೆ. ಇದಕ್ಕಾಗಿ ನಾವು ದೊಡ್ಡ ಹೋರಾಟ ನಡೆಸಿದ್ದೇವೆ, ಯೋಜನೆ ಅನುಷ್ಠಾನಗೊಳಿಸಲು ಕಾನೂನಾತ್ಮಕ ಹೋರಾಟದ ಜೊತೆಗೆ ರಾಜಕೀಯ ಇಚ್ಛಾಶಕ್ತಿಯೂ ಬೇಕಾಗಿದೆ ಎಂದರು.

ಪ್ರತಿ ವರ್ಷ ಬೆಂಗಳೂರಿನ ಜನಸಂಖ್ಯೆ 10 ಲಕ್ಷದಷ್ಟು ಹೆಚ್ಚಾಗುತ್ತಿದೆ, ಹೆಚ್ಚುವರಿಯಾಗಿ 6.5 ಟಿಎಂಸಿ ಕಾವೇರಿ ನೀರು ಬೆಂಗಳೂರಿಗೆ ಮೀಸಲು ಇಡಬೇಕು ಎಂದು ಹೊಸದಾಗಿ ಲೆಕ್ಕಾಚಾರ ಮಾಡಲಾಗಿದೆ. ಇದರಲ್ಲಿ 1.5 ಟಿಎಂಸಿಯಷ್ಟು ನೀರು ಉಳಿಯುವ ನಿರೀಕ್ಷೆ ಇದೆ. ದಿನೇ, ದಿನೇ ನೀರಿನ ಸಮಸ್ಯೆ ಹೆಚ್ಚಾಗುತ್ತಿದ್ದು, ಬೆಂಗಳೂರಿನ ಜನತೆಗೆ ಯಾವುದೇ ತೊಂದರೆಯಾಗದಂತೆ ಕುಡಿಯುವ ನೀರು ಪೂರೈಸುವುದು ನಮ್ಮ ಕರ್ತವ್ಯ ಎಂದು ಭರವಸೆ ನೀಡಿದರು.

ಯಗಚಿ ನದಿ ಅಣೆಕಟ್ಟೆನ ಕಾಲುವೆಗಳ ಅಭಿವೃದ್ಧಿ ಬಗ್ಗೆ ಅಧಿಕಾರಿಗಳು ವರದಿ ನೀಡಿದ್ದು, ಈಗಾಗಲೇ 5.5 ಕಿ.ಮೀ.ನಷ್ಟು ಮಣ್ಣನ್ನು ತೆಗೆದಿದ್ದು, 1.5 ಕಿ.ಮೀ.ನಷ್ಟು ಕಾಮಗಾರಿ ಭೂಸ್ವಾಧೀನದ ವಿಚಾರವಾಗಿ ಸ್ಥಗಿತಗೊಂಡಿದೆ, ಎತ್ತಿನಹೊಳೆ ಯೋಜನೆಗೆ ಮಹತ್ವ ನೀಡಿದಂತೆ ಯಗಚಿ ಯೋಜನೆಗೂ ಮೊದಲ ಆದ್ಯತೆ ನೀಡುತ್ತೇವೆ ಎಂದರು.

ಭದ್ರಾ ಮೇಲ್ದಂಡೆ ಯೋಜನೆ ಅಡಿ 856 ಕೋಟಿ ರೂ. ಮೊತ್ತದ ಕಾಮಗಾರಿಗೆ ಮಂಜೂರಾತಿ ನೀಡಲಾಗಿದೆ, ಯೋಜನೆ ಹಾದು ಹೋಗುವ ಹಲವೆಡೆ ಭೂಸ್ವಾಧೀನ ಸಮಸ್ಯೆಯಿದ್ದು, ಬಗೆಹರಿಸಲಾಗುತ್ತಿದೆ. ಕೋವಿಡ್ ಸಮಯದಲ್ಲಿ ಕಾಮಗಾರಿ ಕುಂಠಿತವಾಯಿತು. ಕೇಂದ್ರ ಸರ್ಕಾರ 5,300 ಕೋಟಿ ರೂ. ಅನುದಾನ ನೀಡುವಲ್ಲಿ ವಿಳಂಬ ಮಾಡಿರುವ ಕಾರಣ ಹಿನ್ನಡೆಯಾಗಿದೆ ಎಂದರು. ಕೃಷ್ಣ ಮೇಲ್ದಂಡೆ ಯೋಜನೆಯ ಪುನರ್ ವಸತಿ ಕಾರ್ಯ ಎಂದಿಗೂ ಮುಗಿಯದ ಕೆಲಸ, ಈ ಹಿಂದೆ ಮೂಲಸೌರ್ಕರ್ಯಗಳ ಅಭಿವೃದ್ಧಿಗೆ 2017ರಲ್ಲಿ 191 ಕೋಟಿ ರೂ. ಮೀಸಲಿಟ್ಟು ಮುಕ್ತಾಯ ಮಾಡಲಾಗುವುದು ಎಂದು ಹೇಳಲಾಗಿತ್ತು. ಈಗ ಹೊಸದಾಗಿ 2,600 ಕೋಟಿ ರೂ. ಪ್ರಸ್ತಾವನೆ ಸಲ್ಲಿಸಿದ್ದೀರಿ. ಮೊದಲಿಗೆ ಜಮೀನು ಕಳೆದುಕೊಂಡವರಿಗೆ ಪರಿಹಾರದ ಹಣ ಮತ್ತು ಜಮೀನುಗಳಿಗೆ ನೀರು ಬಿಡುಗಡೆ ಮಾಡಬೇಕು, ಈ ಎಲ್ಲಾ ಕೆಲಸಗಳು ಆದ ನಂತರ ಮಿಕ್ಕ ವಿಚಾರಗಳ ಬಗ್ಗೆ ಗಮನ ಹರಿಸಲಾಗುವುದು ಎಂದು ತಿಳಿಸಿದರು.

# ಬೆಳ್ಳೂಡಿಯಲ್ಲಿ ನಾಳೆ ನೂತನ ದೇವಸ್ಥಾನದ ಉದ್ಘಾಟನೆ

ಬೆಳ್ಳೂಡಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಚಂದ್ರಗುತ್ತೆಮ್ಮ ದೇವಿಯ ದೇವಸ್ಥಾನದ ಉದ್ಘಾಟನೆ ಮತ್ತು ದೇವಿಯ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ನಾಳೆ ಗುರುವಾರ ಬೆಳಿಗ್ಗೆ 10 ಗಂಟೆಗೆ ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ ಜರುಗಲಿದೆ.

ಈ ಕಾರ್ಯಕ್ರಮದ ಅಂಗವಾಗಿ ಇಂದು ಬೆಳಿಗ್ಗೆ 7 ಗಂಟೆಗೆ ಹವನ ಕಾರ್ಯಕ್ರಮಗಳು ನಡೆಯಲಿದ್ದು, ಸಂಜೆ 4 ಗಂಟೆಗೆ ವಿವಿಧ ಗ್ರಾಮಗಳಿಂದ ಆಗಮಿಸುವ ದೇವರುಗಳನ್ನು ಕಾಗಿನೆಲೆ ಶ್ರೀಗಳ ಸಮ್ಮುಖದಲ್ಲಿ ಬರಮಾಡಿಕೊಳ್ಳಲಾಗುವುದು. ರಾತ್ರಿ 10 ಗಂಟೆಯಿಂದ ಭಾನುವಳ್ಳಿ ಮತ್ತು ಹಾರೋಗೊಪ್ಪ ಗ್ರಾಮಗಳ ಭಜನಾ ಸಂಘದವರಿಂದ ಭಜನಾ ಸಂಘದವರಿಂದ ಭಜನಾ ಕಾರ್ಯಕ್ರಮ ಇರುತ್ತದೆ.

# ಹದಗೆಟ್ಟ ಕಾನೂನು ಸುವ್ಯವಸ್ಥೆ

**(5ನೇ ಪುಟದಿಂದ)** ಸಭಾಧ್ಯಕ್ಷರ ಕಚೇರಿಗೆ ಸೂಚನಾ ಪತ್ರ ನೀಡಬೇಕಲ್ಲವೇ ? ಎಂದು ಸಭಾಧ್ಯಕ್ಷರು ಪ್ರಶ್ನಿಸಿದರು.

ಸಚಿವ ಪರಮೇಶ್ವರ್, ಕಾನೂನು ಸುವ್ಯವಸ್ಥೆಯನ್ನು ನಿಲುವಳಿ ಸೂಚನೆಯಡಿ ಚರ್ಚಿಸಲು ಅವಕಾಶವಿದೆಯೇ ಎಂದರು.

ಈ ಹಂತದಲ್ಲಿ ವಿರೋಧ ಪಕ್ಷಗಳ ಸದಸ್ಯರು ಧ್ವನಿ ಏರಿಸಿ ವಾಗ್ವಾದಕ್ಕೆ ಇಳಿದಾಗ ಆಡಳಿತ ಪಕ್ಷದ ಶಾಸಕರಿಂದಲೂ ಪ್ರತಿಯಾಗಿ ಗದ್ದಲ ಕೇಳಿಬಂದಿತು. ಇದರಿಂದ ಸದನ ಕೆಲಕಾಲ ಗೊಂದಲದ ವಾತಾವರಣದಲ್ಲಿ ಮುಳುಗಿತು.

ಸಭಾಧ್ಯಕ್ಷರು, ಕೊಬ್ಬರಿ ಬೆಲೆ ಕುರಿತು ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ, ಕಾನೂನು ಸುವ್ಯವಸ್ಥೆ ಕುರಿತು ಹೊಸ ಸೂಚನೆ ಕೊಟ್ಟರೆ ನಾಳೆ ಪರಿಶೀಲಿಸುತ್ತೇನೆ ಎಂದು ಸ್ಪಷ್ಟನೆ ನೀಡಿದರು.

# ಹರಿಹರ: ಶೀಘ್ರ ಜನಸ್ಪಂದನ ಸಭೆ

**(5ನೇ ಪುಟದಿಂದ)** ಸುಮಾರು 50 ಜನರಿಗೆ ಇ- ಸ್ವತ್ತು ದಾಖಲೆಗಳನ್ನು ನೀಡಲಾಯಿತು. ಈ ಆಂದೋಲನ ಮಾರ್ಚ್ 15ರವರೆಗೆ ಇರುತ್ತದೆ ಸಾರ್ವಜನಿಕರು ಸದುಪಯೋಗ ಪಡಿದುಕೊಳ್ಳಲು ಹೇಳಿದರು.

ಏಪ್ರಿಲ್ ತಿಂಗಳವರೆಗೆ ನಗರದ ಜನತೆಗೆ ನೀರಿನ ಸಮಸ್ಯೆಗಳು ಬರದಂತೆ ಎಚ್ಚರ ವಹಿಸಲು ನದಿಯಲ್ಲಿ ನೀರಿನ ಪ್ರಮಾಣ ಎಷ್ಟಿದೆ, ನೀರು ಶುದ್ಧೀಕರಣ ಕೇಂದ್ರದಲ್ಲಿ ಯಾವ ರೀತಿಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂಬುದನ್ನು ಬೆಳಗ್ಗೆಯಿಂದ ಪರಿಶೀಲನೆ ನಡೆಸಿದ್ದು, ಮುಂದಿನ ದಿನಗಳಲ್ಲಿ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಗಳು ಬರದಂತೆ ತಡೆಯಲು ಮತ್ತು ಏನೇ ಸಮಸ್ಯೆಗಳು ಬಂದರೂ ಅದನ್ನು ಸಮರ್ಥವಾಗಿ ನಿಭಾಯಿಸಲು ಎಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಿದರು. ನಗರಸಭೆ ನೂತನ ಕಟ್ಟಡದ ಕಾಮಗಾರಿಯ ಗುಣಮಟ್ಟ ನೋಡಿಕೊಳ್ಳು ವಂತೆಯೂ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ನಗರಸಭೆ ಪೌರಾಯುಕ್ತ ಐಗೂರು ಬಸವರಾಜ್, ತಹಶೀಲ್ದಾರ್ ಗುರುಬಸವರಾಜ್, ನಗರ ಯೋಜನಾಧಿಕಾರಿ ಮಾಲತೇಶ್, ಜಲಸಿರಿ ಇಲಾಖೆಯ ಎಇಇ ನವೀನ್ ಕುಮಾರ್, ಚಿಂತಾಮಣಿ ಗಣೇಶ ದೇವಸ್ಥಾನದ ಅಧ್ಯಕ್ಷ ಸತ್ಯನಾರಾಯಣ, ಎಇಇ ತಿಪ್ಪೇಸ್ವಾಮಿ, ನಗರಸಭೆ ಸದಸ್ಯ ಅಬ್ದುಲ್ ಅಲಿಂ, ಕಾಂಗ್ರೆಸ್ ಮುಖಂಡ ದಾದಾಪೀರ್ ಭಾನುವಳ್ಳಿ, ಇಂಜಿನಿಯರ್ ರೆಹಮಾನ್, ಮಂಜುಳಾ, ಮಂಜುನಾಥ್ , ಡಿಸಿ ಆಪ್ತ ಸಹಾಯಕ ಶ್ರೀನಿವಾಸ್, ಪೊಲೀಸ್ ವಾಗೀಶ್ ಇತರರು ಹಾಜರಿದ್ದರು.

## ನಗರದಲ್ಲಿ ಇಂದು

ನಿಂಚನ ಪಬ್ಲಿಕ್ ಶಾಲೆಯ ವಾರ್ಷಿಕೊತ್ಸವ ಹಾಗೂ ನಿಂಚನೋತ್ಸವ ಕಾರ್ಯಕ್ರಮವು ಇಂದು ಸಂಜೆ 4 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.

ಮುಖ್ಯ ಅತಿಥಿಗಳು : ಜಿ. ಕೊಟ್ರೇಶ್, ಪುಷ್ಪಲತಾ, ಬಿ. ಎಂ. ಚೌಡಪ್ಪ, ಆರ್. ಎಂ. ಭರತ್. ಉಪಸ್ಥಿತಿ : ಶೃತಿ ಇನಾಮ್‌ದಾರ್, ಡಿ.ಎಂ. ಸಂತೋಷ್, ಎಂ.ಎಸ್. ರೂಪ, ಎಸ್. ನಿಂಗಪ್ಪ.

# ನಿರುದ್ಯೋಗ ಸಮಸ್ಯೆ ಉಲ್ಬಣ

**(5ನೇ ಪುಟದಿಂದ)** ಸಮಸ್ಯೆ ಇದೀಗ ಶೇಕಡ 10.05ಕ್ಕೆ ತಲುಪಿದೆ.

ಇನ್ನು ವಯೋಮಿತಿ ಆಧಾರದಲ್ಲಿ ನೋಡಿದರೆ 20 ರಿಂದ 24ರ ವಯೋಮಾನದವರು ಶೇಕಡ 43.65 ರಷ್ಟು ನಿರುದ್ಯೋಗ ಸಮಸ್ಯೆ ಎದುರಿಸುತ್ತಿದ್ದಾರೆ. ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುತ್ತೇವೆ ಎಂದು ಹೇಳಿದ ಮೋದಿ ಅವರು, ನಿರುದ್ಯೋಗ ಸಮಸ್ಯೆ ಸೃಷ್ಟಿಸಿದ್ದಾರೆ.

ಇನ್ನಾದರೂ ಉದ್ಯೋಗ ಮೇಳದ ನಾಟಕ ನಿಲ್ಲಿಸಿ, ನೀವು ಕೊಟ್ಟ ಮಾತನ್ನು ಉಳಿಸಿಕೊಳ್ಳಲಿಲ್ಲ ಏಕೆ ? ಎಂದು ಪ್ರಶ್ನಿಸಿದ್ದಾರೆ.

2022ರಲ್ಲಿ ವಿಶ್ವಸಂಸ್ಥೆ ಪ್ರಕಟಿಸಿದ ನಿರುದ್ಯೋಗ ಹೆಚ್ಚಳ ಪಟ್ಟಿಯ ಪ್ರಕಾರ ಉದ್ಯೋಗ ಸೃಷ್ಟಿಯಲ್ಲಿ ನಮ್ಮ ದೇಶ ಪಾಕಿಸ್ತಾನಕ್ಕಿಂತಲೂ ಕೆಳಗಿದೆ ಎಂದಿದ್ದಾರೆ. ಉದ್ಯೋಗ ಮೇಳಗಳಲ್ಲಿ ಕೆಲಸ ಕೊಡಿಸುವ ಜೊತೆಗೆ ಉದ್ಯೋಗಿಗಳಿಗೆ ಬಡ್ತಿ ನೀಡಿ, ಅದನ್ನೂ ನೀವು ಲೆಕ್ಕ ಹಾಕಿದ್ದೀರಿ ಎಂಬ ವರದಿಗಳು ಬಂದಿವೆ. ಇದೇ ಕಾರಣಕ್ಕೆ ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆಯ ಸಮೀಕ್ಷೆಯನ್ನು ನೀವು ಮುಚ್ಚಿಡುವ ಪ್ರಯತ್ನ ಮಾಡುತ್ತಿದ್ದೀರಿ ಎಂದು ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಯುಪಿಎ ಸರ್ಕಾರದ ಅವಧಿಯಲ್ಲಿ ಪ್ರತಿ ವರ್ಷ 75 ಲಕ್ಷದಷ್ಟು ಉದ್ಯೋಗ ಸೃಷ್ಟಿಯಾಗುತ್ತಿದ್ದವು, ನೀವು ಬಂದ ನಂತರ 29 ಲಕ್ಷಕ್ಕೆ ಇಳಿದಿದೆ.

ಅಪರಾಧ ದಾಖಲೆಗಳ ಪ್ರಕಾರ ಪ್ರತಿ ಗಂಟೆಗೆ ಇಬ್ಬರು ನಿರುದ್ಯೋಗಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದೇ ನಿಮ್ಮ ಸಾಧನೆಯೇ, ಇನ್ನಾದರೂ ಉದ್ಯೋಗ ಮೇಳದ ನಾಟಕಗಳನ್ನು ಬಿಡಿ, ನೀವು ಕೊಟ್ಟ ಭರವಸೆಯನ್ನು ಏಕೆ ಈಡೇರಿಸಿಲ್ಲ ? ಎಂದು ಪ್ರಶ್ನಿಸಿದ್ದಾರೆ.




ಜನ್ಮದಿನದ ಶುಭಾಶಯಗಳು

ಇಂದು ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ನಮ್ಮೆಲ್ಲರ ಆತ್ಮೀಯರೂ, ಸ್ನೇಹಜೀವಿಗಳೂ ಮತ್ತು ನಮ್ಮ ಸಂಘದ ಅಧ್ಯಕ್ಷರಾದ

ಶ್ರೀ ಬುಲೆಟ್ ರುದ್ರೇಶ್

ಅವರಿಗೆ ಹೃದಯಪೂರ್ವಕ ಶುಭಾಶಯಗಳು.

ಶುಭ ಕೋರುವವರು :
ಕಾವೇರಿ ಮಾತಾ ಪ್ಲಂಬರ್ ಕಾರ್ಮಿಕರ ಸಂಘದ ಎಲ್ಲಾ ಪದಾಧಿಕಾರಿಗಳು ದಾವಣಗೆರೆ.
ಸ್ಟೇಡಿಯಂ ಫ್ರೇಂಡ್ಸ್ ಗ್ರೂಪ್ಸ್ ದಾವಣಗೆರೆ



ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು





ಇಂದು ತಮ್ಮ ಆರನೇ ವರ್ಷದ ವಿವಾಹ ವಾರ್ಷಿಕೋತ್ಸವದ ಸಂಭ್ರಮದಲ್ಲಿರುವ ಡಿ.ಎಸ್.ಎಸ್. ಮುಖಂಡರೂ, ಲಾಸ್ಯ ಫೌಂಡೇಶನ್, ಸಂಸ್ಥಾಪಕರೂ, ಶ್ರೀ ಲಲಿತ ಎಜುಕೇಷನಲ್ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್‌ನ, ಕಾರ್ಯದರ್ಶಿಗಳೂ,
ಎಸ್.ಪಿ. ಸಾರ್ವಜನಿಕ ಮಾಹಿತಿ ಹಾಗೂ ಗ್ರಾಹಕರ ಸೇವಾ ಕೇಂದ್ರದ ಮಾಲೀಕರೂ, ದಾವಣಗೆರೆ ಮಹಾನಗರ ಪಾಲಿಕೆಯ 12ನೇ ವಾರ್ಡ್‌ನ ಕಾಂಗ್ರೆಸ್ ಮುಖಂಡರು, ಕಾಂಗ್ರೆಸ್ ಜಿಲ್ಲಾ ಎಸ್.ಸಿ ಘಟಕದ ಸಂಘಟನಾ ಕಾರ್ಯದರ್ಶಿಗಳೂ, "ಕದಂಬ ಕ್ರಾಂತಿ" ಹಾಗೂ "ಕದಂಬ ಕೇಸರಿ" ದಿನ ಪತ್ರಿಕೆಯ ಸಂಪಾದಕರು ಹಾಗೂ ನಮ್ಮ ಆತ್ಮೀಯ ಸಹೋದರರೂ ಆದ

ಶ್ರೀ ಸೂರ್ಯಪ್ರಕಾಶ್ ಆರ್. ಮತ್ತು ಶ್ರೀಮತಿ ಸುಮಲತ ಜಿ.ಎಸ್.

ದಂಪತಿಗೆ ವಿವಾಹ ವಾರ್ಷಿಕೋತ್ಸವದ ಹಾರ್ದಿಕ ಶುಭಾಶಯಗಳು....
ಬಂಧುಗಳು ಮತ್ತು ಮಿತ್ರರು

॥ ಶ್ರೀ ಬಸವೇಶ್ವರ ಪ್ರಸನ್ನ ॥

# ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕು ಸಂಕ್ಲೀಪುರ ಗ್ರಾಮದ ವಾಸಿ

ದಿ॥ ಪಾರ್ವತಮ್ಮ ದಿ॥ ಸೋಮನಗೌಡಪ್ಪನವರ ಮಗ ಶ್ರೀ ಚಂದಿ ಗೌಡ್ರು ಬಸಮ್ಮ ತೋಟನಗೌಡ (CST) ಮತ್ತು ಸಹೋದರರು ಮಾಡುವ ವಿಜ್ಞಾಪನೆಗಳು.

ದಿನಾಂಕ : 7.2.2024ನೇ ಬುಧವಾರ ಸಂಜೆ 4.03 ನಿಮಿಷಕ್ಕೆ ನನ್ನ ಸಹೋದರನಾದ

## ಶ್ರೀ ಚಂದಿಗೌಡ್ರ, ನಾಗೇಂದ್ರಪ್ಪನವರು

BSSKN ಬಾತಿ ನಿವೃತ್ತ ನೌಕರರು

ಇವರು ದೈವಾಧೀನರಾದರೆಂದು ತಿಳಿಸಿಲು ವಿಷಾದಿಸುತ್ತೇವೆ. ಇವರ ಸ್ಮರಣಾರ್ಥ

"ಕೈಲಾಸ ಶಿವಗಣಾರಾಧನೆ "ಯನ್ನು

ದಿನಾಂಕ : 15.2.2024ನೇ ಗುರುವಾರ 10 ರಿಂದ 11.30ಕ್ಕೆ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ಆದ್ದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕೆಂದು ವಿನಂತಿಸುತ್ತೇವೆ.

**ಇಂತಿ ದುಃಖತಪ್ತ ಕುಟುಂಬ ವರ್ಗ :**

ಶ್ರೀಮತಿ ರುದ್ರಮ್ಮ ಚಂದಿ ಗೌಡ್ರ ದೇವೇಂದ್ರಪ್ಪ ಮತ್ತು ಮಕ್ಕಳು
ಶ್ರೀಮತಿ ವನಜಾಕ್ಷಮ್ಮ ಚಂದಿ ಗೌಡ್ರ ದಿ॥ ನಾಗೇಂದ್ರಪ್ಪ ಮತ್ತು ಮಕ್ಕಳು
ಶ್ರೀಮತಿ ಮಂಜುಳಾ ಚಂದಿ ಗೌಡ್ರ ಉಮಾಪತಿ ಮತ್ತು ಮಕ್ಕಳು
ಶ್ರೀಮತಿ ಬಸಮ್ಮ ಚಂದಿ ಗೌಡ್ರ ತೋಟನಗೌಡ ಮತ್ತು ಮಕ್ಕಳು
ಶ್ರೀಮತಿ ವಿನೋದಮ್ಮ ಚಂದಿ ಗೌಡ್ರ ರೇವಣಸಿದ್ದಪ್ಪ ಮತ್ತು ಮಕ್ಕಳು
ಶ್ರೀಮತಿ ಸುಧಾ ಚಂದಿ ಗೌಡ್ರ ಶಿವನಗೌಡ ಮತ್ತು ಮಕ್ಕಳು
ಶ್ರೀಮತಿ ಶಾರದಾ ಚಂದಿ ಗೌಡ್ರ ಗುರುಮೂರ್ತಿ ಮತ್ತು ಮಕ್ಕಳು

ದಿ॥ ಚಂದಿ ಗೌಡ್ರ ನಾಗೇಂದ್ರಪ್ಪನವರ ಮಕ್ಕಳಾದ :
ಶ್ರೀಮತಿ ಸಿ. ನಿರ್ಮಲ ಸಿ.ಎನ್. ದೇವರಾಜ್
ಶ್ರೀಮತಿ ಸಿ. ಸೌಮ್ಯ ಸಿ.ಎನ್. ಮಲ್ಲಿಕಾರ್ಜುನ್, ವಕೀಲರು

ತಂಗಿಯರಾದ: ಶ್ರೀಮತಿ ರತ್ನಮ್ಮ ಹಲಗೇರಿ ಬಸವರಾಜಪ್ಪ, ಕಾರಿಗನೂರು.
ಶ್ರೀಮತಿ ಸುಜಾತ ನಿಂಗಪ್ಪ, ನದಿಹರಳಹಳ್ಳಿ.

ಅಳಿಯಂದಿರಾದ :
ಶ್ರೀಮತಿ ಉಮಾದೇವಿ ಚಂದ್ರಪ್ಪ ಮತ್ತು ಮಕ್ಕಳು, ಹೊಳೆಸಿರಿಗೆರೆ.
ಶ್ರೀಮತಿ ನೇತ್ರಾ ವಿರುಪಾಕ್ಷಪ್ಪ ಮತ್ತು ಮಕ್ಕಳು, ಉಚ್ಚಂಗಿದುರ್ಗ.
ಶ್ರೀಮತಿ ಹೇಮಾ ಮಲ್ಲಿಕಾರ್ಜುನ್ ಮತ್ತು ಮಕ್ಕಳು, ಬೆಂಗಳೂರು.
ಶ್ರೀಮತಿ ಸುಮಾ ನಿರಂಜನ್ ಮತ್ತು ಮಕ್ಕಳು, ಹೊನ್ನಾಳ್ಳಿ.
ಶ್ರೀಮತಿ ಲತಾ ತಿಪ್ಪೇಶಪ್ಪ ಮತ್ತು ಮಕ್ಕಳು, ಹಳಕಟ್ಟೆ.
ಶ್ರೀಮತಿ ದೀಪಾ ಬಸವನಗೌಡ ಮತ್ತು ಮಕ್ಕಳು, ಕುಣೇಬೆಳಕೆರೆ.
ಶ್ರೀಮತಿ ಮಂಗಳ ಸಂತೋಷ್ ಮತ್ತು ಮಕ್ಕಳು, ಮಲೇಬೆನ್ನೂರು.
ಶ್ರೀಮತಿ ರೇಖಾ ನಾಗರಾಜ್ ಮತ್ತು ಮಕ್ಕಳು, ಹರಿಹರ.
ಶ್ರೀಮತಿ ತ್ರಿವೇಣಿ ನಿಂಗಪ್ಪ ಮತ್ತು ಮಕ್ಕಳು, ಎಳೆಹೊಳೆ.
ಶ್ರೀಮತಿ ಸ್ಫೂರ್ತಿ, ಅಂಕುಶಾ, ಬನ್ನಿಕೋಡು.
ಚಂದಿ ಗೌಡ್ರ ವಂಶಸ್ಥರು ಹಾಗೂ ಬಂಧು-ಮಿತ್ರರು. ಫೋ. : 88842 48122

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.